# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (134)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯಡಿ 89 ಶಿಶುವಿಹಾರ, 13 ಪ್ರಾಥಮಿಕ ಶಾಲೆ, 34 ಪ್ರೌಢಶಾಲೆಗಳು, 13 ಸಂಯುಕ್ತ ಪದವಿ ಪೂರ್ವ ಕಾಲೇಜುಗಳು, 4 ಪ್ರಥಮ ದರ್ಜೆ ಕಾಲೇಜು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಪಬ್ಲಿಕ್ ಸ್ಕೂಲ್ ಅಸ್ತಿತ್ವದಲ್ಲಿದ್ದು, ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಪಾಲಿಕೆಯ ವತಿಯಿಂದ ಉಚಿತವಾಗಿ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ108ಎಂಎಂಎಸ್2010, ದಿನಾಂಕ:31-05-2010ರ ಆದೇಶದಂತೆ 2010-11ನೇ ಶೈಕ್ಷಣಿಕ ಸಾಲಿನಿಂದ ಅಕ್ಷರ ದಾಸೋಹ ಕಾರ್ಯಕ್ರಮದ ಅಕ್ಷಯ ಪಾತ್ರ ಪ್ರತಿಷ್ಠಾನಕ್ಕೆ ವಹಿಸಿರುವ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ನವೀಕರಿಸುವ ಸಂದರ್ಭದಲ್ಲಿ ಆ ಸಂಸ್ಥೆಯವರು ದೇಣಿಗೆಯನ್ನು ಪಡೆಯಬಾರದು ಎಂಬ ಕಟ್ಟುನಿಟ್ಟಿನ ಷರತ್ತಿಗನುಗುಣವಾಗಿ ಈ ಯೋಜನೆಯನ್ನು ಮುಂದುವರೆಸಬಹುದೆಂದು ಸೂಚನೆ ನೀಡಿರುವ ಮೇರೆಗೆ ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿದ್ಯಾರ್ಥಿಗಳಿಂದಾಗಲೀ, ಅವರ ಪೋಷಕರಿಂದಾಗಲೀ ಯಾವುದೇ ಹಣವನ್ನು ಸಂಗ್ರಹಿಸುವುದನ್ನು ನಿಷೇದಿಸಿದೆ ಎಂಬ ಅಂಶದ ಆಧಾರದ ಮೇರೆಗೆ, ಕಳೆದ 2011-12 ಹಾಗೂ 2012-13ನೇ ಸಾಲಿನಲ್ಲಿ ಮೆ॥ ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ಸರಬರಾಜು ಆದೇಶ ನೀಡಲಾಗಿತ್ತು.

ದಿನಾಂಕ:22-05-2013 ರಂದು ಮೆ॥ ಅಕ್ಷಯ ಪಾತ್ರ ಫೌಂಡೇಷನ್ ರವರು ಮಾನ್ಯ ಆಯುಕ್ತರವರಿಗೆ ಪತ್ರವನ್ನು ಬರೆದು ಅಕ್ಷಯಪಾತ್ರ ಪ್ರತಿಷ್ಠಾನವು ಹಲವು ವರ್ಷಗಳಿಂದ ಪಾಲಿಕೆಯ ಶಾಲೆಗಳಲ್ಲಿ ಅತ್ಯುತ್ತಮವಾದ ಮಧ್ಯಾಹ್ನದ ಬಿಸಿಯೂಟವನ್ನು ತಮ್ಮೊಡನೆ ಇರುವ ಒಡಂಬಡಿಕೆಯಂತೆ ನೀಡುತ್ತಿರುವುದು ಸರಿಯಷ್ಟೆ. ಹಾಲಿ ಇರುವ ಒಡಂಬಡಿಕೆಯು ಅಂತ್ಯಗೊಂಡಿದ್ದು, ಅದನ್ನು ನವೀಕರಿಸಬೇಕಾದ ಅವಶ್ಯಕತೆ ಇರುತ್ತದೆ. ಅದರಂತೆ ಶಾಲೆಯು ಪ್ರಾರಂಭವಾದ ದಿನದಿಂದಲೇ ಮಧ್ಯಾಹ್ನದ ಬಿಸಿ ಊಟವನ್ನು ಪಾಲಿಕೆಯ ಆಡಳಿತದಲ್ಲಿರುವ ಎಲ್ಲಾ ಶಾಲೆಗಳಿಗೂ ಒದಗಿಸುವುದಕ್ಕಾಗಿ ಒಡಂಬಡಿಕೆಯನ್ನು ಸಿದ್ಧಪಡಿಸಲು ಅಧಿಕೃತ ಆದೇಶವೊಂದನ್ನು ಕೊಟ್ಟಲ್ಲಿ, ಪ್ರತಿಷ್ಠಾನಕ್ಕೆ ಸೂಕ್ತವಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಹಾಯಕವಾಗುತ್ತದೆ. ಏರುತ್ತಿರುವ ವೆಚ್ಚಗಳ ಈ ದಿನಗಳಲ್ಲಿ ಪ್ರತಿಷ್ಠಾನದ ಧ್ಯೇಯೋದ್ದೇಶಕ್ಕೆ ಅನುಗುಣವಾದ ಗುಣಮಟ್ಟದ ವಿದ್ಯಾಭ್ಯಾಸಕ್ಕೆ ಪೂರಕವಾಗಿ ನಾವು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ತಾವು ಈಗಾಗಲೇ ನಮಗೆ ತಿಳಿಸಿರುವಂತೆ ಪ್ರತಿ ಊಟಕ್ಕೆ ರೂ.8.00 ನಿಗಧಿಪಡಿಸಿರುವಂತೆ ಆದೇಶವು ಹೊರಡಿಸಿದ ದಿನದಿಂದ ವ್ಯತ್ಯಾಸದ ಹಣವನ್ನು ನಮ್ಮ ಪ್ರತಿಷ್ಠಾನಕ್ಕೆ ತಕ್ಷಣ ನೀಡಬೇಕೆಂದು ಕೋರಿರುತ್ತಾರೆ.

ಹಲವಾರು ವರ್ಷಗಳಿಂದ ಮೆ॥ ಇಸ್ಕಾನ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸಲಾಗುತ್ತಿದೆ. ಕಳೆದ ಸಾಲಿನಲ್ಲಿ ತಲಾ ಊಟಕ್ಕೆ ರೂ.8.00 ರಂತೆ ನೀಡಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿಯೂ ಅದೇ ದರದಲ್ಲಿ ಊಟವನ್ನು ಒದಗಿಸಲು ಒಡಂಬಡಿಕೆ ಮಾಡಿಕೊಳ್ಳಲು ಸರಬರಾಜು ಆದೇಶ ನೀಡಲು ಕೋರಿರುತ್ತಾರೆ. ಕಳೆದ ಸಾಲಿನಲ್ಲಿ ನೀಡಿರುವ ಒಡಂಬಡಿಕೆಯು ಮುಕ್ತಾಯಗೊಂಡಿರುವುದರಿಂದ ಹಾಗೂ ಶಾಲಾ/ಕಾಲೇಜುಗಳು ಜೂನ್ 1 ರಿಂದ ಪ್ರಾರಂಭವಾಗುವುದರಿಂದ ಪ್ರಸಕ್ತ 2013-14ನೇ ಶೈಕ್ಷಣಿಕ ವರ್ಷವು ದಿನಾಂಕ:01-06-2013 ರಿಂದ ಪ್ರಾರಂಭವಾಗಲಿರುವುದರಿಂದ, ಪಾಲಿಕೆಯ ಸಭೆಯ ಅನುಮೋದನೆ ಪಡೆಯಲು ಕಾಲಾವಕಾಶ ಬೇಕಾಗಿರುವ ಹಿನ್ನಲೆಯಲ್ಲಿ ಪಾಲಿಕೆಯ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ

ವ್ಯವಸ್ಥೆಯನ್ನು ಹಿಂದಿನ (ತಲಾ ಒಂದು ಊಟಕ್ಕೆ ರೂ.8.00) ದರದಲ್ಲಿಯೇ ದಿನಾಂಕ:10-06-2013 ರಿಂದ 10-04-2014 ರವರೆಗೆ ಒದಗಿಸುವಂತೆ ಮೆ॥ ಅಕ್ಷಯಪಾತ್ರ ಫೌಂಡೇಷನ್ ರವರಿಗೆ ದಿನಾಂಕ:05-07-2013 ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ. ಸದರಿ ಪ್ರಕ್ರಿಯೆಗೆ ತಗಲುವ ಮೊತ್ತವನ್ನು 2013-14ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 25 ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ಸೌಲಭ್ಯಗಳು (ಪಿ0242) ಶೀರ್ಷಿಕೆಯಲ್ಲಿ ಮೀಸಲಿರಿಸುವ ಅನುದಾನದಲ್ಲಿ ಭರಿಸಬಹುದಾಗಿರುತ್ತದೆ.

ಮಂದುವರೆದು ಮೆ॥ ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ತಲಾ ಊಟಕ್ಕೆ ರೂ.8.00ರ ದರದಂತೆ ಪ್ರಸಕ್ತ ಸಾಲಿನಲ್ಲಿಯೂ ಸಹ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಜೊತೆಗೆ ಭಾರತೀಯ ವಿದ್ಯಾಭವನ ಮತ್ತು ಬಿ.ಬಿ.ಎಂ.ಪಿ. ಸಹಯೋಗದೊಂದಿಗೆ ನಡೆಸುತ್ತಿರುವ ಪಬ್ಲಿಕ್ ಶಾಲೆಯ 250 ವಿದ್ಯಾರ್ಥಿಗಳಿಗೂ ಸಹ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಒದಗಿಸಲು ಮೆ॥ ಅಕ್ಷಯ ಪಾತ್ರ ಫೌಂಡೇಷನ್ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ:27-11-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ:27-11-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ:27-11-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (135)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಸ್ತಿ ತೆರಿಗೆ, ಜಾಹೀರಾತು ತೆರಿಗೆ ಮತ್ತು ಇತರೆ ಬಾಕಿ ತೆರಿಗೆಗಳನ್ನು ವಸೂಲು ಮಾಡಲು ಕೆ.ಎಂ.ಸಿ.ಕಾಯ್ದೆ 1976 ಸೆಕ್ಷನ್ 108-ಎ ರಿಂದ 113 ರವರೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಸದರಿ ಕಲಂನ ಅಧಿಕಾರ ಮಿತಿಯಲ್ಲಿ ಪಾಲಿಕೆಗೆ ಬಾಕಿ ಇರುವ ಲಕ್ಷಾಂತರ ರೂಪಾಯಿಗಳ ವಸೂಲಾತಿ ಮಾಡುವುದು ಕಷ್ಟಕರವಾಗಿರುತ್ತದೆ. ಕೆ.ಎಂ.ಸಿ. ಕಾಯ್ದೆ 1975ರ ಸೆಕ್ಷನ್ 143 ರಂತೆ ಪಾಲಿಕೆಗೆ ಬಾಕಿ ಇರುವ ಮೊತ್ತವನ್ನು 6 ವರ್ಷಗಳೊಳಗಾಗಿ ವಸೂಲಾತಿ ಮಾಡದಿದ್ದಲ್ಲಿ ಸದರಿ ಮೊತ್ತವು ಅನೂರ್ಜಿತವಾಗುತ್ತದೆ. ಆದಕಾರಣ ಕರ್ನಾಟಕ ಸರ್ಕಾರದಲ್ಲಿ ಹಲವಾರು ಇಲಾಖೆಗಳು ಮುಖ್ಯವಾಗಿ ವಾಣಿಜ್ಯ ತೆರಿಗೆ ಇಲಾಖೆ, ಸಾರಿಗೆ ಇಲಾಖೆ, ಷೆಡ್ಯೂಲ್ ಬ್ಯಾಂಕ್ ಇತ್ಯಾದಿ ಎಲ್ಲಾ ಇಲಾಖೆಗಳು ಕರ್ನಾಟಕ ಭೂ ಕಂದಾಯ ಕಾಯ್ದೆಯ 1964ರ ಹದಿನಾಲ್ಕನೇ ಅಧ್ಯಾಯದ (CHAPTER XIV Realisation of Land Revenue and other Public demands) ಸೆಕ್ಷನ್ 157 ರಿಂದ 192 ರವರೆಗೆ ಇರುವ ನಿಯಮಗಳಡಿಯಲ್ಲಿ ಬಾಕಿ ಕಂದಾಯದ ಹಣವನ್ನು ವಸೂಲಾತಿ ಮಾಡುತ್ತಿದ್ದು, ಸದರಿ ಇಲಾಖೆಗಳಲ್ಲಿ ಬಾಕಿ ವಸೂಲಾತಿ ಕಾರ್ಯಕ್ರಮ ತೃಪ್ತಿಕರವಾಗಿರುತ್ತದೆ. ಅದೇ ಮಾದರಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲೂ ಸಹ ಕೆ.ಎಂ.ಸಿ. ಕಾಯ್ದೆಯ - ಕಲಂಗಳಡಿಯಲ್ಲಿ ನೀಡಿರುವ ಅಧಿಕಾರದ ಜೊತೆಗೆ ಈಗಾಗಲೇ ಪಾಲಿಕೆಯ ಸಿಬ್ಬಂದಿ ಆಡಳಿತ ನಿರ್ವಹಣೆಗಾಗಿ ಕೆ.ಸಿ.ಎಸ್.ಆರ್. ನಿಯಮಗಳನ್ನು ಅಳವಡಿಸಿಕೊಂಡಿರುವ ಮಾದರಿಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಹದಿನಾಲ್ಕನೇ ಅಧ್ಯಾಯದ (CHAPTER XIV Realisation of Land Revenue and other Public demands) ಸೆಕ್ಷನ್ 157 ರಿಂದ 192 ರವರೆಗಿನ ನಿಯಮಾವಳಿಗಳನ್ನು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಅಳವಡಿಸಿಕೊಂಡು ಪಾಲಿಕೆಗೆ ಬಾಕಿ ಇರುವ ಲಕ್ಷಾಂತರ ರೂಪಾಯಿಗಳ ಮೊತ್ತವನ್ನು ಕಂದಾಯದ ಬಾಕಿಯಂತೆ ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಮುಖಾಂತರ ವಸೂಲಿ ಮಾಡಲು ಕ್ರಮ ಕೈಗೊಳ್ಳುವುದು.

ಭೂ ಕಂದಾಯ ಕಾಯ್ದೆ ನಿಯಮಗಳನ್ನು ಅಳವಡಿಸಿಕೊಂಡ ನಂತರ ಪಾಲಿಕೆಯ ವೆಚ್ಚದಲ್ಲಿ ಭೂ ಕಂದಾಯ ಕಾಯ್ದೆಯಡಿಯಲ್ಲಿ ಒಬ್ಬ ತಹಶೀಲ್ದಾರ್ / ವಿಶೇಷ ತಹಶೀಲ್ದಾರ್‌ರವರನ್ನು ಕಂದಾಯ ಇಲಾಖೆಯಿಂದ ನಿಯೋಜನೆ ಮೇರೆಗೆ ಪಡೆದುಕೊಂಡು ಪಾಲಿಕೆಯ ಆಯುಕ್ತರ ಮೇಲುಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳುವುದು ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆಯಡಿಯಲ್ಲಿ ಸದರಿ ತಹಶೀಲ್ದಾರ್ / ವಿಶೇಷ ತಹಶೀಲ್ದಾರ್‌ರವರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಂದ ನಿಯಮಾನುಸಾರ ಅನುಮೋದನೆಯನ್ನು ಪಡೆದುಕೊಂಡು ಕಾರ್ಯನಿರ್ವಹಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:02-12-2013ರ ಸ್ವಯಂಪ್ರೇರಿತ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:02-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:02–12–2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ : 05 (136)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು 1971ರಲ್ಲಿ ತಯಾರಿಸಿದ್ದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ರಚನೆಯಾದ ನಂತರ ಪಾಲಿಕೆ ವ್ಯಾಪ್ತಿಯಲ್ಲಿ ಎಂಟು ವಲಯಗಳು ಒಳಪಡುವುದರಿಂದ ನೇಮಕಾತಿ ನಿಯಮಾವಳಿಯ ಪರಿಷ್ಕರಣೆಯ ಕಾರ್ಯ ಅವಶ್ಯಕವಾಗಿರುವುದರಿಂದ ಸದರಿ ನಿಯಮಾವಳಿಗಳನ್ನು ಪರಿಷ್ಕರಿಸಿರುವ ಪರಿಶೀಲನಾ ಸಮಿತಿಯು ರಚನೆಯಾಗಿರುವುದರಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿ:27/06/2011ರ ಸಭೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: ಸಿಆಸುಸ್ಥಾ/06/11-12, ದಿ:27/06/2011ರಂತೆ ಪಾಲಿಕೆಯ ಈ ಹಿಂದಿನ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮಾರ್ಪಡಿಸಲು ಶ್ರೀಮತಿ ಹರಿಣಿ ವನಜಕುಮಾರಿ, ಕೆ.ಎ.ಎಸ್., (ನಿವೃತ್ತ) ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.15,000/- ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಮುಂದುವರೆದಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರವರ ಟಿಪ್ಪಣಿ ಸಂಖ್ಯೆ:ಬಿ12(1ಬಿ)ಪಿಆರ್/69/11-12, ದಿನಾಂಕ:12/08/2011ರನ್ವಯ ಶ್ರೀಮತಿ ಹರಿಣಿ ವನಜಕುಮಾರಿ, ಕೆ.ಎ.ಎಸ್.,(ನಿವೃತ್ತ) ಇವರ ಸೇವೆಯು ಪಾಲಿಕೆಯ ವೃಂದ ಮತ್ತು ನೇಮಾಕಾತಿ ನಿಯಮಾವಳಿಗಳಿಗೆ ತಿದ್ದುಪಡಿ/ಪರಿಷ್ಕರಿಸಿರುವ ವಿಷಯದಲ್ಲಿ ಸದರಿಯವರ ಸೇವೆಯು ಅವಶ್ಯಕವಾಗಿರುವುದರಿಂದ ಸದರಿ ಅಧಿಕಾರಿಯವರನ್ನು 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ-20 ರಲ್ಲಿ ಅವಕಾಶವಿರುವಂತೆ ಸದರಿ ನಿವೃತ್ತ ಅಧಿಕಾರಿಯವರನ್ನು ಪಾಲಿಕೆಯಲ್ಲಿ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.15,000/-ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ..

ತದನಂತರ, ಈ ಕಛೇರಿಯ ಆದೇಶ ಸಂಖ್ಯೆ:ಬಿ12(1ಬಿ)ಪಿಆರ್/154/11-12, ದಿ:17/09/2011ರ ಆದೇಶದನ್ವಯ ಸದರಿ ಅಧಿಕಾರಿಯವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನಿಯಮಾವಳಿಗೆ ಸಂಬಂಧಿಸಿದ ಕಾರ್ಯನಿರ್ವಹಿಸಲು ಸರ್ಕಾರದ/ಪಾಲಿಕೆಯ ಸಭೆಯ ಆದೇಶವನ್ನು ನಿರೀಕ್ಷಿಸಿ ಪ್ರತಿ ಮಾಹೆಯಾನ ರೂ.15,000/- ಸಂಚಿತ ವೇತನದ ಆಧಾರದ ಮೇಲೆ ಆಯುಕ್ತರ (ಆಡಳಿತ) ಶಾಖೆಯಲ್ಲಿ ಕಾರ್ಯನಿರ್ವಹಿಸಲು ಕೆಲವೊಂದು ಷರತ್ತುಗೊಳಪಡಿಸಿ ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಮಾನ್ಯ ಆಯುಕ್ತರವರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರವರ ಟಿಪ್ಪಣಿ ಸಂಖ್ಯೆ:ಬಿ12(1ಬಿ)ಪಿಆರ್/69/11-12, ದಿ:12/08/2011ರಂತೆ ಮಂಡಿಸಲಾಗಿರುವ ಟಿಪ್ಪಣಿಗೆ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ:09/09/2011ರ ಸಭೆಯ ನಡವಳಿಯ ವಿಷಯದ ಸಂಖ್ಯೆ:ತೆಆಸ್ಥಾಸ/267/11-12 ಮತ್ತು ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂ:25(201)/11-12, ದಿ:29/11/2011ರಂತೆ ಪಾಲಿಕೆಯ ತೆರಿಗೆ ಆರ್ಥಿಕ ಮತ್ತು ಸ್ಥಾಯಿ ಸಮಿತಿಯಲ್ಲಿ ಹಾಗೂ ಪಾಲಿಕೆಯ ಸಭೆಯಲ್ಲಿ ಸದರಿ ನಿವೃತ್ತ ಅಧಿಕಾರಿಯವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.15,000/- ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳುವ ವಿಷಯವಾಗಿ ಒಪ್ಪಿಗೆಯನ್ನು ಸೂಚಿಸಲಾಗಿರುವಂತೆ, ಸದರಿ ವಿಷಯದ ಕುರಿತು ಸರ್ಕಾರಕ್ಕೆ ಬರೆದಿರುವ ಪತ್ರ ಸಂಖ್ಯೆ:ಬಿ12(1ಬಿ)ಪಿಆರ್/154/12-13, ದಿ:21/05/2012ರ ಈ ಕಛೇರಿಯ ಪತ್ರದಲ್ಲಿ ಸರ್ಕಾರದ ಅನುಮೋದನೆಯನ್ನು ಕೋರಲಾಗಿರುತ್ತದೆ.

ಮುಂದುವರೆದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ದಿ:10/09/2012ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ದಿ:10/09/2012ರಂದು ನಡೆದ ಜಂಟಿ ಸಭೆಯ ನಿರ್ಣಯ ವಿಷಯದ ಸಂಖ್ಯೆ:ಸಿಆಸುಸ್ಥಾಸ/18/12-13ರಂತೆ ನಡೆದ ಜಂಟಿ ಸಭೆಯಲ್ಲಿ ಶ್ರೀಮತಿ ಹರಿಣಿ ವನಜಕುಮಾರಿ ಕೆ.ಎ.ಎಸ್., (ನಿವೃತ್ತ) ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.15,000/- ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿದ್ದು ಸದರಿ ಅವಧಿಯು 16/09/2012ಕ್ಕೆ ಪೂರ್ಣಗೊಂಡಿರುವುದರಿಂದ, ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ರಚನೆ ಕುರಿತಂತಹ ಕಾರ್ಯವು ಇನ್ನೂ ಪ್ರಗತಿಯ ಹಂತದಲ್ಲಿರುವುದರಿಂದ ಸದರಿ ನಿವೃತ್ತ ಅಧಿಕಾರಿಯವರ ಸೇವೆಯು ಅತ್ಯವಶ್ಯಕವಾಗಿರುವ ಹಿನ್ನೆಲೆಯಲ್ಲಿ ಇವರ ಸೇವೆಯನ್ನು ಮತ್ತೊಂದು ವರ್ಷದ ಅವಧಿಗೆ ಹಿಂದಿನಂತೆ ವಿಧಿಸಿರುವ ಷರತ್ತಿಗೊಳಪಡಿಸಿ ಮುಂದುವರೆಸಲು ಮಾನ್ಯ ಆಯುಕ್ತರನ್ನು ಕೋರಲು ತೀರ್ಮಾನಿಸಲಾಗಿರುತ್ತದೆ.

ಈ ಸಂಬಂಧವಾಗಿ, ಸರ್ಕಾರದ ಪತ್ರ ಸಂಖ್ಯೆ:ನಅಇ279ಎಂಎನ್‌ಯು2011, ದಿನಾಂಕ:22/06/2012ರ ಸರ್ಕಾರದ ಪತ್ರದಲ್ಲಿ ಶ್ರೀಮತಿ ಹರಿಣಿ ವನಜಕುಮಾರಿ ಕೆ.ಎ.ಎಸ್., (ನಿವೃತ್ತ) ಇವರನ್ನು ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಪರಿಶೀಲಿಸಲು ಪಾಲಿಕೆ ದಿನಾಂಕ:29/11/2011ರ ಸಭೆಯ ನಡವಳಿಯ ಪ್ರತಿಯನ್ನು ಒದಗಿಸಲು ನಿರ್ದೇಶಿಸಿರುವಂತೆ ಈ ಸಂಬಂಧವಾಗಿ ಈ ಕಛೇರಿಯಿಂದ ಸರ್ಕಾರಕ್ಕೆ ಬರೆದಿರುವ ಪತ್ರ ಸಂ:ಬಿ12(1ಬಿ)ಪಿಆರ್/154/12-13, ದಿನಾಂಕ:02/01/2013 ಮತ್ತು 06/02/2013ರ ಪಾಲಿಕೆಯ ಪತ್ರಗಳಲ್ಲಿ ಸದರಿ ನಿವೃತ್ತ ಅಧಿಕಾರಿಯವರನ್ನು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ದಿನಾಂಕ:17/09/2011 ರಿಂದ 2 ವರ್ಷಗಳ ಅವಧಿಗೆ ಮಾಹೆಯಾನ ರೂ.15,000/- ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳುವ ಪ್ರಸ್ತಾವನೆಗೆ ಅನುಮೋದನೆ ಕೋರಲಾಗಿರುತ್ತದೆ ಹಾಗೂ ಪಾಲಿಕೆಯ ಸಭೆಯ ನಿರ್ಣಯದ ಪ್ರತಿಯನ್ನು ಲಗತ್ತಿಸಿ ಕಳುಹಿಸಲಾಗಿರುತ್ತದೆ.

ಈ ಸಂಬಂಧವಾಗಿ, ಈ ಕಛೇರಿಯ ಈ ಕಛೇರಿಯಿಂದ ಸರ್ಕಾರಕ್ಕೆ ಬರೆದಿರುವ ಪತ್ರ ಸಂಖ್ಯೆ:ಬಿ12(1ಬಿ)ಪಿಆರ್/154/12-13, ದಿ:10/07/2013ರ ಪತ್ರದನ್ವಯ ಸರ್ಕಾರದ ಅನುಮೋದನೆ ಕೋರಿದ್ದು, ಆದರೆ ಸರ್ಕಾರದಿಂದ ಈವರೆವಿಗೂ ಅನುಮೋದನೆ ದೊರೆತಿರುವುದಿಲ್ಲ.

ಈ ಹಿನ್ನೆಲೆಯಲ್ಲಿ, ಶ್ರೀಮತಿ ಹರಿಣಿ ವನಜಕುಮಾರಿ ಕೆ.ಎ.ಎಸ್., (ನಿವೃತ್ತ) ಇವರನ್ನು ಮಾಹೆಯಾನ ರೂ.15,000/- ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳಲು ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದರೂ ಸಹ ಸದರಿ ಪ್ರಸ್ತಾವನೆಗೆ ಈವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ಆದರೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪರಿಷ್ಕರಣೆಯ ಕಾರ್ಯವು ಅಂತಿಮ ಹಂತದಲ್ಲಿರುವುದರಿಂದ, ಸದರಿ ನಿವೃತ್ತ ಅಧಿಕಾರಿಯವರ ಸೇವೆಯು ಅವಶ್ಯಕವಾಗಿರುವುದರಿಂದ, ಸದರಿ ಅಧಿಕಾರಿಯವರ ಸೇವೆಯನ್ನು ದಿ:17/09/2013 ರಿಂದ ದಿ:31/12/2013ರವರೆಗೆ 3 ತಿಂಗಳ ಅವಧಿಗೆ ಮಾಹೆಯಾನ ರೂ.15,000/- ಸಂಚಿತ ವೇತನದಲ್ಲಿ ಮುಂದುವರೆಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಆಯುಕ್ತರವರ ದಿನಾಂಕ:06-12-2013 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 23-12-2013 ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

..........3

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (138)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಎಂ. ರಾಜಣ್ಣ, ನಿವೃತ್ತ ಹಿರಿಯ ಆರೋಗ್ಯ ಪರಿವೀಕ್ಷಕರು, ಇವರು ದಿನಾಂಕ: 30-06-2013 ರಂದು ಸೇವೆಯಿಂದ ವಯೋ ನಿವೃತ್ತಿಯನ್ನು ಹೊಂದಿದ್ದು, ಇವರ ಸೇವೆಯನ್ನು ವಿಸ್ತರಿಸಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳುವಂತೆ ಉಲ್ಲೇಖಿತದ ಪತ್ರದಲ್ಲಿ ಮಾನ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಕೋರಿರುತ್ತಾರೆ.

ಈ ಸಂಬಂಧವಾಗಿ, ಕಾನೂನು ಕೋಶದ ಮುಖ್ಯಸ್ಥರು ವರದಿಯಲ್ಲಿ ನಗರಾಭಿವೃದ್ಧಿ ಇಲಾಖೆ ಪತ್ರದ ಸಂಖ್ಯೆ: ನಅಇ 210 ಎಂಎನ್‌ಯು ದಿನಾಂಕ: 30-07-2011ರ ಪತ್ರದಲ್ಲಿ ತಿಳಿಸಿರುವಂತೆ ನಿವೃತ್ತಿ ಹೊಂದಿದ ನೌಕರರನ್ನು ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು / ಮುಂದುವರಿಸುವುದು ಒಳ್ಳೆಯ ಸಂಪ್ರದಾಯವಲ್ಲ ಹಾಗೂ ಇಂತಹ ಪ್ರಸ್ತಾವನೆಗಳನ್ನು ಸರ್ಕಾರವು ಪುರಸ್ಕರಿಸುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಅಲ್ಲದೆ ಶ್ರೀ ಎಂ. ರಾಜಣ್ಣ ನವರು ಯಾವುದಾದರೂ ಕಾರ್ಯದಲ್ಲಿ ವಿಶೇಷ ಪರಿಣತಿಯನ್ನು ಹೊಂದಿದ್ದು, ಅಂತಹ ವಿಶೇಷ ಪರಿಣತೆಯನ್ನು ಹೊಂದಿರುವ ಬೇರೊಬ್ಬ ಸಿಬ್ಬಂದಿ ಇಲ್ಲದಿದ್ದ ಪಕ್ಷದಲ್ಲಿ ಹಾಗೂ ಇವರ ಸೇವೆಯನ್ನು ಪಡೆಯದಿದ್ದರೆ ನಗರ ಪಾಲಿಕೆಯ ಕೆಲಸ ಕಾರ್ಯಗಳು ಕುಂಠಿತವಾಗುತ್ತವೆ ಎಂಬುದನ್ನು ಪರಿಗಣಿಸುವುದಾದರೆ, ಅಂತಹ ಪ್ರಸಂಗಗಳಲ್ಲಿ ಆಯುಕ್ತರ ಮುಖಾಂತರ ಸರ್ಕಾರದ ಅನುಮೋದನೆ ಪಡೆದು ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ಪಾಲಿಕೆಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಹಿತದೃಷ್ಟಿಯಿಂದ ಶ್ರೀ ಎಂ. ರಾಜಣ್ಣ, ನಿವೃತ್ತ ಹಿರಿಯ ಆರೋಗ್ಯ ಪರಿವೀಕ್ಷಕರು ರವರನ್ನು ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ತೀರ್ಮಾನಕ್ಕಾಗಿ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:09-12-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 23-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:09-12-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.....2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 09-12-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (139)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸಂಸ್ಕರಣೆ/ನಿರ್ವಹಣೆ ಮಾಡುವ ಉದ್ದೇಶಕ್ಕಾಗಿ ಸರ್ಕಾರವು ಕ್ರಮವಾಗಿ ಕನ್ನಹಳ್ಳಿ ಹಾಗೂ ಸೀಗೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 85ರ 29-03 (ಎಕರೆ-ಗುಂಟೆ) ಹಾಗೂ ಸರ್ವೆ ಸಂಖ್ಯೆ 48ರ 07-31 (ಎಕರೆ ಗುಂಟೆ) ಜಮೀನನ್ನು ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ.

ಸದರಿ ಕನ್ನಹಳ್ಳಿ ಸರ್ವೆ ಸಂಖ್ಯೆ 85ರ ಜಮೀನನಲ್ಲಿ ಈಗಾಗಲೇ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು DBFOT ಆಧಾರದ ಮೇಲೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಹೋಟೆಲ್‌ಗಳಿಂದ (Bulk generators) ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸಂಸ್ಕರಿಸಲು ಸಂಸ್ಕರಣಾ ಘಟಕ ಸ್ಥಾಪಿಸಲು ಮೆ: ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ರವರು ಮುಂದೆ ಬಂದಿದ್ದು, ಅಗತ್ಯವಿರುವ 5 ಎಕರೆ ಜಮೀನನ್ನು ಪಾಲಿಕೆ ವತಿಯಿಂದ ಕನ್ನಹಳ್ಳಿಗೆ ಸೇರಿದ ಜಾಗವನ್ನು ಹಸ್ತಾಂತರಿಸಲು ಸರ್ಕಾರದ ಅನುಮೋದನೆ ದೊರೆತಿದೆ.

ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಕಾಂಪೌಂಡ್ ಗೋಡೆ ರಸ್ತೆಗಳ ನಿರ್ಮಾಣ ಸೆಕ್ಯೂರಿಟಿ ರೂಮ್, ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಮಾನ್ಯ ಆಯುಕ್ತರು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತಾರೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 407.50 ಲಕ್ಷಗಳಾಗಿದ್ದು, ಕಾಮಗಾರಿಯ ಅಂದಾಜು ಮೊತ್ತ ರೂ. 200-00 ಲಕ್ಷಗಳ ಮೇಲ್ಪಟ್ಟು ರೂ. 500-00 ಲಕ್ಷಗಳ ಒಳಗೆ ಇರುವ ಕಾಮಗಾರಿಗಳಿಗೆ ಪಾಲಿಕೆಯ ಕೌನ್ಸಿಲ್ ಸಭೆಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಪ್ರತ್ಯೇಕ ಕಡತವನ್ನು ಸಿದ್ದಪಡಿಸಿ ಪ್ರಸ್ತಾವನೆಯನ್ನು ಈಗಾಗಲೇ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಕೌನ್ಸಿಲ್ ಸಭೆಗೆ ಸಲ್ಲಿಸಲಾಗಿರುತ್ತದೆ. ಮುಂದುವರೆದು ಮುಖ್ಯ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರು ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿಯನ್ನು ರೂ. 407.50 ಲಕ್ಷಗಳ ಮೊತ್ತಕ್ಕೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ.

ಅದರಂತೆ, ದಿನಾಂಕ 19-02-2013ರಂದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ (1) ಶ್ರೀ. ಎಸ್.ಟಿ. ರಮೇಶ್ (ಮೆ: ಗಣಪತಿ ಸ್ಟೋನ್ ಕ್ರಷರ್), 1ನೇ ದರ್ಜೆ ಗುತ್ತಿಗೆದಾರರು ಮತ್ತು (2) ಶ್ರೀ. ಎಸ್.ಎನ್. ಪ್ರಸಾದ್, 1ನೇ ದರ್ಜೆ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಶ್ರೀ. ಎಸ್.ಟಿ. ರಮೇಶ್ ಹಾಗೂ ಶ್ರೀ. ಎಸ್.ಎನ್ ಪ್ರಸಾದ್ ಬಿಡ್ಡುದಾರರು ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು ಅರ್ಹರಾದ ಹಿನ್ನೆಲೆಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಸದರಿಯವರ ಆರ್ಥಿಕ ಬಿಡ್ಡನ್ನು ದಿನಾಂಕ 18-05-2013ರಂದು ತೆರೆಯಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಅರ್ಹ ಬಿಡ್ಡುದಾರರು ನಮೂದಿಸಿರುವ ದರಗಳು ಹಾಗೂ ಆರ್ಥಿಕ ವಿವರಗಳು ಕೆಳಕಂಡಂತಿರುತ್ತದೆ;

1. ಶ್ರೀ. ಎಸ್.ಟಿ.ರಮೇಶ್ ರವರು ನಮೂದಿಸಿರುವ ಮೊತ್ತ ರೂ. 3,58,56,677.79
2. ಶ್ರೀ. ಎಸ್.ಎನ್. ಪ್ರಸಾದ್ ರವರು ನಮೂದಿಸಿರುವ ಮೊತ್ತ ರೂ.. 3,77,54,939.59

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಇಬ್ಬರು ಅರ್ಹ ಬಿಡ್ಡುದಾರರ ಪೈಕಿ ಶ್ರೀ. ಎಸ್.ಟಿ. ರಮೇಶ್ ರವರು ನಮೂದಿಸಿರುವ ದರಗಳು ಕಡಿಮೆ ಇದ್ದು ಎಲ್-1 ಗುತ್ತಿಗೆದಾರರಾಗಿರುತ್ತಾರೆ. ಇವರು ಸಲ್ಲಿಸಿರುವ ದರಗಳ ವಿವರಗಳು ಕೆಳಕಂಡಂತೆ ಇರುತ್ತದೆ;

.........................2

| | |
|---|---|
| • ಟೆಂಡರ್‌ಗೆ ಇಟ್ಟ ಮೊತ್ತ | ರೂ. 3,85,71,800.20 |
| • ಪ್ರಸಕ್ತ ಸಾಲಿನ ದರಗಳ ಆಧಾರದ ಮೇಲಿನ ಟೆಂಡರ್ ಮೊತ್ತ | ರೂ. 3,89,89,803-00 |
| • ಕಡಿಮೆ ಗುತ್ತಿಗೆದಾರರು ನಮೂದಿಸಿರುವ ಒಟ್ಟಾರೆ ಟೆಂಡರ್ ಮೊತ್ತ | ರೂ. 3,58,56,677-79 |
| • ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಎಲ್-1 ಬಿಡ್ಡುದಾರರ ಮೊತ್ತ | ಶೇ. 7.04(ಕಡಿಮೆ) |
| • ಪ್ರಸಕ್ತ ಸಾಲಿನ ದರಗಳ ಆಧಾರದ ಮೇಲಿನ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಎಲ್-1 ಬಿಡ್ಡುದಾರರ ಮೊತ್ತ | ಶೇ. 8.04(ಕಡಿಮೆ) |

ಸದರಿಯವರ ಆರ್ಥಿಕ ಬಿಡ್ಡನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ಸಮುಚಿತ ಮಾರ್ಗದಲ್ಲಿ ಸಲ್ಲಿಸಿ ಮಾನ್ಯ ಆಯುಕ್ತರವರಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಟೆಂಡರ್‌ನಲ್ಲಿ ಭಾಗವಹಿಸಿ ಕಡಿಮೆ ಬಿಡ್ಡುದಾರರಾಗಿರುವ ಶ್ರೀ. ಎಸ್.ಟಿ.ರಮೇಶ್ (ಮೆ: ಗಣಪತಿ ಸ್ಟೋನ್ ಕ್ರಷರ್)ರವರು ನಮೂದಿಸಿರುವ ಮೊತ್ತ ರೂ. 3,58,56,677-79 (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಲ್ಲಿ ಶೇ. 8.04ರಷ್ಟು ಕಡಿಮೆ) ಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:12-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (140)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 4,500 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಈ ತ್ಯಾಜ್ಯವನ್ನು ಹಿಂದೆ ಮಾವಳ್ಳಿಪುರ, ಚೀಮಸಂದ್ರ, ಸುಬ್ಬರಾಯನಪಾಳ್ಯ, ಅಂಜನಪುರ, ಕಲ್ಲುಗಣಿ, ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ (ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್), ಮಂಡೂರು (ಉತ್ತರ) ಮತ್ತು ಮಂಡೂರು (ದಕ್ಷಿಣ) ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು.

ಚೀಮಸಂದ್ರ ಮತ್ತು ಅಂಜನಪುರ, ಕಲ್ಲುಗಣಿ ಘಟಕಗಳು ತುಂಬಿದ ಹಿನ್ನೆಲೆಯಲ್ಲಿ ಈ ಘಟಕಗಳಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಸ್ಥಳೀಯರ ಪ್ರತಿಭಟನೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಮಾವಳ್ಳಿಪುರ ಮತ್ತು ಸುಬ್ಬರಾಯನಪಾಳ್ಯ ಘಟಕಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿರುತ್ತದೆ. ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಘಟಕದಲ್ಲೂ ಸಹ ಸ್ಥಳೀಯರ ಪ್ರತಿಭಟನೆಯಿಂದಾಗಿ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿತ್ತು. ಆದರೆ ಇತ್ತೀಚಿಗೆ ಕಳೆದ ಎರಡು ತಿಂಗಳಿನಿಂದ ಸದರಿ ಘಟಕದಲ್ಲಿ ಪ್ರತಿದಿನ ಸುಮಾರು 200-250 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಹಾಗೂ ಉಳಿಕೆ ತ್ಯಾಜ್ಯವನ್ನು ಮಂಡೂರು (ಉತ್ತರ), ಮಂಡೂರು (ದಕ್ಷಿಣ) ಮತ್ತು ಎಸ್.ಬಿಂಗಿಪುರ ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿದ್ದು, ಈ ಘಟಕಗಳ ಮೇಲೆ ಒತ್ತಡ ಹೆಚ್ಚಾಗಿದ್ದು, ಬೆಂಗಳೂರು ನಗರದ ತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ ಉಂಟಾಗಿರುತ್ತದೆ. ಈ ಬಗ್ಗೆ ಶ್ರೀ.ಮೋಹನ್ ಕುಮಾರ್ ಎಂಬುವರು W.P. ನಂ.30450/12 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಸದರಿ ದಾವೆ ವಿಚಾರಣೆಯನ್ನು ನಡೆಸುತ್ತಿದ್ದು, ವಿಚಾರಣೆ ವೇಳೆಯಲ್ಲಿ ಬೆಂಗಳೂರು ನಗರದ ಸುತ್ತಲಿನ ಕನಿಷ್ಠ ಏಳು ಸ್ಥಳಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ನಿರ್ದೇಶನ ನೀಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಿಲೇವಾರಿ/ಸಂಸ್ಕರಣೆಗಾಗಿ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿಯ, ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 85 ರ 29-03 (ಎಕರೆ-ಗುಂಟೆ) ಮತ್ತು ಸೀಗೆಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 48 ರ 07-31 (ಎಕರೆ-ಗುಂಟೆ) ಪ್ರದೇಶದ ಜಮೀನನ್ನು ಪಾಲಿಕೆಗೆ ಸರ್ಕಾರವು ಹಸ್ತಾಂತರಿಸಲಾಗಿರುತ್ತದೆ.

ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 85ರ 29-03 (ಎಕರೆ-ಗುಂಟೆ) ಜಮೀನಿನಲ್ಲಿ ಈಗಾಗಲೇ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು DBFOT ಆಧಾರದ ಮೇಲೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಮುಂದುವರೆದಂತೆ, ಸೀಗೆಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 48 ರಲ್ಲಿ, ಹೆಚ್ಚು ಘನತ್ಯಾಜ್ಯ ಉತ್ಪತ್ತಿಯಾಗುವ (Bulk generator) ಹೋಟೆಲ್, ರೆಸ್ಟೋರೆಂಟ್, ಕಲ್ಯಾಣ ಮಂಟಪ, ಮಾಲ್, ವಾಣಿಜ್ಯ ಸಂಕೀರ್ಣ, ದೇವಸ್ಥಾನ, ಅಪಾರ್ಟ್‌ಮೆಂಟ್, ಸಾರ್ವಜನಿಕರ ಕಛೇರಿಗಳು, ರೈಲು ನಿಲ್ದಾಣ, ಬಸ್ ನಿಲ್ದಾಣ ಇತ್ಯಾದಿಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸೀಗೆಹಳ್ಳಿಯ ಪಾಲಿಕೆಯ ಜಾಗದಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸಲು ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ-2 ರವರ ಕಛೇರಿಯಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

.............................2

ಈ ಹಿನ್ನೆಲೆಯಲ್ಲಿ ಸದರಿ ಘಟಕಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಕಾಂಪೌಂಡ್ ಗೋಡೆ, ರಸ್ತೆಗಳ ನಿರ್ಮಾಣ, ಕಛೇರಿ ಕಟ್ಟಡ, ಸೆಕ್ಯೂರಿಟಿ ರೂಮ್, ವೇ ಬ್ರಿಡ್ಜ್ ಹಾಗೂ ಕಾಂಪೌಂಡ್ ಸುತ್ತಲೂ ಗಿಡ ನೆಡುವುದು, ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಸದರಿ ಕಾಮಗಾರಿಗೆ ಸ್ಥಳಗಳನ್ನು ಪರಿಶೀಲಿಸಿ ಸ್ಥಳದ ಅವಶ್ಯಕತೆಗನುಗುಣವಾಗಿ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2012-13 ನೇ ಸಾಲಿನ ದರಪಟ್ಟಿಗಳ/ಮಾರುಕಟ್ಟೆಗಳ ದರಗಳನ್ವಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಅಂದಾಜು ಮೊತ್ತವು ರೂ.407.50 ಲಕ್ಷಗಳಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:24-05-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯ.

1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.407.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.407.50 ಲಕ್ಷಗಳಿಗೆ ಪಾಲಿಕೆಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ0935 Approach roads ಅಡಿಯಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (141)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ತೆರವುಗೊಳಿಸಿ ವೈಜ್ಞಾನಿಕವಾಗಿ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಪಾಲಿಕೆ ವ್ಯಾಪ್ತಿಯಲ್ಲಿರುವ ಪ್ರತಿದಿನ 10 ಕೆ.ಜಿ. ಗಿಂತಲೂ ಹೆಚ್ಚಿನ ಘನತ್ಯಾಜ್ಯವನ್ನು ಉತ್ಪಾದಿಸುವ ಮಾಲೀಕರೇ ಅದನ್ನು ಸೂಕ್ತ ರೀತಿಯಲ್ಲಿ ಸಂಸ್ಕರಿಸಿ ವಿಲೇವಾರಿ ಮಾಡುವ ಜವಾಬ್ದಾರರಾಗಿರುತ್ತಾರೆ. ಈ ಗುಂಪಿಗೆ ಅಪಾರ್ಟ್‌ಮೆಂಟ್‌ಗಳು, ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ಮಾಲ್‌ಗಳು ಹಾಗೂ ಇತರೆ ಹೆಚ್ಚು ಘನತ್ಯಾಜ್ಯವನ್ನು ಉತ್ಪಾದಿಸುವುದನ್ನು ಸೇರಿಸಬಹುದಾಗಿದೆ. ಇವರುಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸದೇ ಇದ್ದ ಪಕ್ಷದಲ್ಲಿ ಸಾರ್ವಜನಿಕರಿಗೆ ಇದರಿಂದಾಗುವ ಪರಿಣಾಮದ ಬಗ್ಗೆ ಗಮನಹರಿಸಿ ಸೂಕ್ತ ರೀತಿಯ ಮುನ್ನೆಚ್ಚರಿಕೆ ಕ್ರಮ ವಹಿಸಬೇಕಾಗಿರುವುದು ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಹೆಚ್ಚು ಘನತ್ಯಾಜ್ಯ ಉತ್ಪಾದಿಸುವವರ ಪೈಕಿ ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ (ರಿ) ರವರೊಂದಿಗೆ ಪರಸ್ಪರ ಚರ್ಚಿಸಿದ ಬಳಿಕ, ಘನತ್ಯಾಜ್ಯ ನಿರ್ವಹಣೆ/ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಅಗತ್ಯವಿರುವ ಜಾಗವನ್ನು ಪಾಲಿಕೆ ವತಿಯಿಂದ ಒದಗಿಸುವಂತೆ ಕೋರಿರುತ್ತಾರೆ. ಸದರಿ ಜಾಗದಲ್ಲಿ ವೇಸ್ಟ್ ಟು ಎನರ್ಜಿ ಘಟಕವನ್ನು ಸ್ಥಾಪಿಸಲು ಮೆ: ನೋಬಲ್ ಎಕ್ಸ್‌ಚೇಂಜ್ ಎನ್ವಿರಾನ್‌ಮೆಂಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಮುಂದೆ ಬಂದಿದ್ದು ಮತ್ತು ನಂತರದ ದಿನಗಳಲ್ಲಿ ನಿರ್ವಹಣೆ ಮಾಡಲು ಅಗತ್ಯವಿರುವ ವೆಚ್ಚವನ್ನು ಹೋಟೆಲ್ ಅಸೋಸಿಯೇಷನ್ ರವರು ಭರಿಸಲು ಒಪ್ಪಿರುತ್ತಾರೆ. ಈ ಸಂಬಂಧ ಪಾಲಿಕೆಗೆ ಸೇರಿದ ಕನ್ನಹಳ್ಳಿಯ ಸರ್ವೆ ನಂ. 85ರ ಒಟ್ಟಾರೆ 29 ಎಕರೆ ಜಾಗದಲ್ಲಿ 5 ಎಕರೆ ಜಾಗವನ್ನು ಹಸ್ತಾಂತರಿಸಲು ದಿನಾಂಕ 8-5-2013ರಂದು Memorandum of Understanding (MOU) ಮಾಡಿಕೊಳ್ಳಲಾಗಿದೆ. MSW rules 2000 ರೀತ್ಯಾ ಘನತ್ಯಾಜ್ಯವನ್ನು ಸಂಸ್ಕರಿಸುವ ಜವಾಬ್ದಾರಿ ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ (ರಿ)ರವರದ್ದಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ನಗರದಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವಲ್ಲಿ ಎದುರಾಗುತ್ತಿರುವ ಸಮಸ್ಯೆಯನ್ನು ನಿವಾರಿಸುವ ಸಂಬಂಧ ಪಾಲಿಕೆ ವತಿಯಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಈ ನಿಟ್ಟಿನಲ್ಲಿ ಬಲ್ಕ್ ಜನರೇಟರ್ ಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ಸಂಸ್ಕರಿಸಲು ಅಗತ್ಯ ಕ್ರಮ ಕೈಗೊಳ್ಳುವುದು ಪ್ರಮುಖವಾಗಿರುತ್ತದೆ. ಪ್ರಸ್ತುತ ಸದರಿ ಯೋಜನೆಯನ್ನು ಪೈಲಟ್ ಯೋಜನೆಯನ್ನಾಗಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಹೊಸದಾಗಿ ಮೇಯರ್ ಆಯ್ಕೆ ಮಾಡಲು ಮತ್ತು ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಡೆಯದೇ ಇದ್ದುದರಿಂದ ಮತ್ತು ಕೌನ್ಸಿಲ್ ಸಭೆ ನಡೆಯದೇ ಇದ್ದುದರಿಂದ ಅಗತ್ಯವಿರುವ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ತೀರ್ಮಾನವನ್ನು ಕೌನ್ಸಿಲ್ ಸಭೆಯ ಗಮನಕ್ಕೆ ತರಲಾಗುವುದು ಎಂದು ತಿಳಿಸುತ್ತಾ ದಿನಾಂಕ:06-07-2013ರಂದು ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಲಾಯಿತು.

ದಿನಾಂಕ:20-7-2013ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ಪರಿಶೀಲನಾ ಸಭೆಯಲ್ಲಿ ಕೈಗೊಂಡ ನಿರ್ಧಾರದಂತೆ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಕನ್ನಹಳ್ಳಿ ಗ್ರಾಮದ ಸರ್ವೆ ನಂ. 85 ರಲ್ಲಿರುವ ಒಟ್ಟಾರೆ 29 ಎಕರೆ ಜಾಗದಲ್ಲಿ 5 ಎಕರೆ ಜಾಗವನ್ನು ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ (ರಿ) ರವರಿಗೆ ಬಲ್ಕ್ ಜನರೇಟರ್ ಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯ ವಿಲೇವಾರಿ/ಸಂಸ್ಕರಣಾ ಘಟಕ ಸ್ಥಾಪನೆ

..........................2

ಮಾಡಲು ಉತ್ತೇಜನ (facilitate) ನೀಡಲು ಮಾತ್ರ ಈ ಜಾಗವನ್ನು ಹಸ್ತಾಂತರಿಸಬೇಕಾಗಿದೆ. ಹಾಗೂ ಈ ಜಾಗವನ್ನು ಘಟಕ ಸ್ಥಾಪನೆ ಉದ್ದೇಶಕ್ಕಾಗಿ ನೀಡಲಾಗುವುದು. ಘಟಕ ಸ್ಥಾಪಿಸಿ 20 ವರ್ಷಗಳ ನಿರ್ವಹಣೆ ನಂತರ as is where is basis ನಂತೆ ಘಟಕವನ್ನು ಪಾಲಿಕೆ ವಶಕ್ಕೆ ಪಡೆಯಲಾಗುವುದು. ಈ ಅವಧಿಯಲ್ಲು ಸಹ ಈ ಜಾಗವು ಪಾಲಿಕೆ ಒಡೆತನದಲ್ಲಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ದಿನಾಂಕ 23-7-2013ರಂದು ಈ ಕೆಳಗಿನ ಅಂಶಕ್ಕೆ ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಮರು ಸಲ್ಲಿಸಲಾಗಿತ್ತು.

1. ಕನ್ನಹಳ್ಳಿ ಸರ್ವೆ ಸಂಖ್ಯೆ 85ರ ಪಾಲಿಕೆಯ ಒಟ್ಟಾರೆ 29 ಎಕರೆ ಪೈಕಿ 5 ಎಕರೆ ಜಾಗವನ್ನು ಪಾಲಿಕೆಯೇ ಮಾಲೀಕತ್ವವನ್ನು ಉಳಿಸಿಕೊಂಡು, ಮೆ: ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ (ರಿ) ರವರಿಗೆ ಬಲ್ಕ್ ಜನರೇಟರ್ ಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು 20 ವರ್ಷಗಳ ಅವಧಿಗೆ "ನಿರ್ವಹಿಸುವ ಉಪಯೋಗಕ್ಕೆ ಮಾತ್ರ (Permissive use only)" ನೀಡಲು ಅನುಮೋದನೆ.

ಅದರಂತೆ ಸರ್ಕಾರದ ಆದೇಶದ ಸಂಖ್ಯೆ ನಅಇ 308 ಎಂಎನ್‌ವೈ 2013 ದಿನಾಂಕ 14-8-2013 ರೀತ್ಯಾ ಕನ್ನಹಳ್ಳಿ ಸರ್ವೇ ಸಂಖ್ಯೆ 85ರಲ್ಲಿ ಇರುವ ಒಟ್ಟಾರೆ 29 ಎಕರೆ ಜಾಗದಲ್ಲಿ 5 ಎಕರೆ ಜಾಗವನ್ನು "ನಿರ್ವಹಿಸುವ ಉಪಯೋಗಕ್ಕೆ ಮಾತ್ರ (Permissive use only)" ಮೆ॥ ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ (ರಿ)ರವರಿಗೆ ನಿಯಮಾನುಸಾರ ಸೂಕ್ತ ಷರತ್ತುಗಳನ್ನು ವಿಧಿಸಿ ಅನುಮತಿ ನೀಡಲು ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಸರ್ಕಾರದ ಅನುಮೋದನೆಯಂತೆ ಕನ್ನಹಳ್ಳಿಯ ಸರ್ವೆ ಸಂಖ್ಯೆ 85ರ ಒಟ್ಟಾರೆ 29 ಎಕರೆ ಜಮೀನಿನಲ್ಲಿ 5 ಎಕರೆ ಜಮೀನನನ್ನು ಮೆ: ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ (ರಿ)ರವರೊಂದಿಗೆ ದಿನಾಂಕ:10-10-2013 ರಂದು ಕರಾರು ಒಪ್ಪಂದ ಮಾಡಿಕೊಂಡು ದಿನಾಂಕ:11-10-2013 ರಂದು ಜಾಗವನ್ನು ಹಸ್ತಾಂತರಿಸಲಾಗಿದ್ದು, ಸದರಿ ವಿಷಯವನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಗಮನಕ್ಕೆ ಹಾಗೂ ನಡವಳಿಯನ್ನು ದಾಖಲಿಸಿಕೊಳ್ಳುವ ಬಗ್ಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:25-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (114)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಗಿರಿನಗರ ಉಪವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು ಇವರು ಪ್ರಸ್ತಾವನೆಯನ್ನು ಸಲ್ಲಿಸಿ, ವಾರ್ಡ್‌ಸಂಖ್ಯೆ:143 ಕತ್ರಿಗುಪ್ಪೆಯಲ್ಲಿ ಬರುವ ಎಲ್.ಎ.ನಂ.18, ಶ್ರೀನಗರದ ಸಿಟಿಎಸ್. ನಂ.3158, ಶ್ರೀನಿವಾಸನಗರದ ಬಿಡಿಎ ಆಸ್ತಿ ಸಂಖ್ಯೆ:5/2 ರ ಹೊಸ ಆಸ್ತಿ ಸಂಖ್ಯೆ:23ರಲ್ಲಿ ಬರುವ 1ನೇ ಮುಖ್ಯರಸ್ತೆ ಜಾಗದಲ್ಲಿರುವ ರಸ್ತೆ ಬದಿಯ ಮಳೆ ನೀರು ಹರಿಯುವ ಚರಂಡಿ ನೀರು ಹಾಗೂ ಸ್ಯಾನಿಟರಿ ಪೈಪ್ ಅನ್ನು ಅಳವಡಿಸಿ ಈ ನೀರು ಸುಸೂತ್ರವಾಗಿ ಹರಿಯಲು ಅಡ್ಡಲಾಗಿರುವ ಶ್ರೀಮತಿ ಶಾಂತ ಕೋಂ ನಟರಾಜ ಇವರಿಗೆ ಸೇರಿದ ನಿವೇಶನ ಸಂಖ್ಯೆ:23ರಲ್ಲಿ ಸುಮಾರು 200 ಚ.ಅಡಿ ಜಾಗವನ್ನು ಮಳೆನೀರಿನ ಚರಂಡಿ ಮತ್ತು ಸ್ಯಾನಿಟರಿ ಲೈಲ್ ಅನ್ನು ಅಳವಡಿಸಲು ಉಪಯೋಗಿಸಿಕೊಂಡಿದ್ದು, ಅದಕ್ಕೆ ಭೂಸ್ವಾಧೀನಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಂಡು ಭೂಪರಿಹಾರವನ್ನು ಪಾವತಿಸಲು ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸ್ವತ್ತಿನ ಬಾಬ್ತು ಒಟ್ಟು ಪರಿಹಾರ ಮತ್ತು ಅದರಲ್ಲಿದ್ದ ಕಾಂಪೌಂಡ್ ಮತ್ತು ಇತರೆಯನ್ನು ಹೊಡೆದುಹಾಕಿರುವ ಬಗ್ಗೆ ಒಟ್ಟು ರೂ.4,77,999/- ಗಳ ಪರಿಹಾರ ಪಾವತಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿಯವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿಲಾಗಿ, State Bank of Mysore ನೌಕರರ ಗೃಹ ನಿರ್ಮಾಣ ಸಹಕಾರ ಸಂಘರವರು ಹೇರೋಹಳ್ಳಿ ಗ್ರಾಮದ ಸರ್ವೆ ನಂ.12/1, ಮತ್ತು ಇತರೆ ಸರ್ವೆ ನಂಬರುಗಳ ಒಟ್ಟು 22 ಎಕರೆ 37 ಗುಂಟೆ ಜಮೀನಿನಲ್ಲಿ ರಚಿಸಲಾದ ಬಡಾವಣೆಯಲ್ಲಿ ಶ್ರೀ.ನಟರಾಜ ಬಿನ್ ಆರ್.ಕೃಷ್ಣಮೂರ್ತಿ ಇವರಿಗೆ ನಿವೇಶನ ಸಂಖ್ಯೆ:23 ರ 30X40 ಚ.ಅಡಿ ನಿವೇಶನವನ್ನ ಮಂಜೂರು ಮಾಡಿ ಮಂಜೂರಾತಿದಾರರಿಗೆ ಎಸ್.ಆರ್.ನಂ.1912/88-89, ದಿ:30-08-1988 ರಂದು ನೊಂದಾವಣೆ ಮಾಡಿಕೊಟ್ಟಿರುತ್ತಾರೆ. ಹಾಗೂ ಸದರಿ State Bank of Mysore ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ದಿ:20-07-1984 ರಲ್ಲಿ ಮೇಲ್ಕಂಡ ನಿವೇಶನದ ಸ್ವಾಧೀನಪತ್ರವನ್ನು ಸಹ ಮಂಜೂರಾತಿದಾರರಿಗೆ ನೀಡಿರುತ್ತಾರೆ. ಆದರೆ, ಸದರಿ ಮಂಜೂರಾತಿದಾರರು ಮೃತಪಟ್ಟಿದ್ದರಿಂದ ಈ ಸ್ವತ್ತನ್ನ ಮಂಜೂರಾತಿದಾರರ ಹೆಂಡತಿ ಶ್ರೀಮತಿ ಶಾಂತಾ ಕೋಂ ನಟರಾಜ ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಿ ಈ ಆಸ್ತಿಗೆ ಪಿಐಡಿ ಸಂಖ್ಯೆ:54-4-4 ಎಂದು ನೀಡಿ ಪಾಲಿಕೆಯವರು ದೃಢೀಕರಣ ನೀಡಿರುತ್ತಾರೆ.

ಈ ಸ್ವತ್ತಿನಲ್ಲಿ ಶ್ರೀನಿವಾಸನಗರದ 14ಏ ಮುಖ್ಯರಸ್ತೆ, 1ನೇ ಅಡ್ಡರಸ್ತೆ ಪ್ರದೇಶಕ್ಕೆ ಹರಿದುಬರುವ ರಸ್ತೆಬದಿ ಮಳೆನೀರು ಮತ್ತು ಸ್ಯಾನಿಟರಿ ಪೈಪ್ ಅನ್ನು ಅಳವಡಿಸಿ ಸಂಪರ್ಕ ಕಲ್ಪಿಸಲು ಸುಮಾರು 200 ಚ.ಅಡಿ ಜಾಗವನ್ನು ಮೇಲ್ಕಂಡ ಕಾಮಗಾರಿಗೆ ಉಪಯೋಗಿಸಿಕೊಳ್ಳಲಾಗುತ್ತದೆ ಎಂದು ಮೋಜಣಿದಾರರು ಅಳತೆ ಮಾಡಿ ವರದಿಸಿದ್ದು, ಆ ನಕ್ಷೆಗೆ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ದೃಢೀಕರಿಸಿರುತ್ತಾರೆ. ಅಲ್ಲದೆ ಕೇಂದ್ರ ಮೌಲ್ಯಮಾಪನಾ ಸಮಿತಿ, ಬೆಂಗಳೂರು ಇವರು ದಿನಾಂಕ:21-09-2011 ರಂದು ಪ್ರಕಟಿಸಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳು ಈ ಪ್ರದೇಶದಲ್ಲಿ ಚ.ಅಡಿ 1ಕ್ಕೆ ರೂ.2500 ಗಳಿರುವುದಾಗಿ ಪ್ರಕಟಿಸಿರುತ್ತಾರೆ. ಈ ಅಂಕಿ ಅಂಶಗಳನ್ನು ಪರಿಗಣಿಸಿದಾಗ ಭೂಸ್ವಾಧೀನಪಡಿಸಿಕೊಳ್ಳುವ 200 ಚ.ಅಡಿ ಆಸ್ತಿಗೆ ಭೂಸ್ವಾಧೀನ ಕಾಯ್ದೆಯನ್ವಯ ಪಾವತಿಸಬೇಕಾದ ಭೂಪರಿಹಾರದ ಇತರೆ ವೆಚ್ಚಗಳ ವಿವರಗಳು ಕೆಳಕಂಡಂತಿದೆ;

C

## ಭೂಸ್ವಾಧೀನಪಡಿಸಿಕೊಳ್ಳುವ ಆಸ್ತಿಯ ವಿವರ ಮತ್ತು ಅದಕ್ಕೆ ಪಾವತಿಸುವ ಭೂಪರಿಹಾರ ಮತ್ತು ಇತರೆ ವೆಚ್ಚಗಳ ವಿವರಗಳು ಈ ಕೆಳಕಂಡಂತಿವೆ

| | | |
|---|---|---|
| 1 | ಸ್ವತ್ತಿನ ವಾರ್ಡ್ ಸಂಖ್ಯೆ ಮತ್ತು ಹೆಸರು | 143 ಕತ್ರಿಗುಪ್ಪೆ |
| 2 | ಸ್ವತ್ತಿನ ಸಂಖ್ಯೆ | ಹಳೇ ಆಸ್ತಿ ಸಂಖ್ಯೆ:23, ಹೊಸ ಪಿಐಡಿ ನಂ.54-4-4<br>ಸಿಟಿಎಸ್. ನಂ.3158, ಎಲ್.ಎ.ನಂ.-18 |
| 3 | ಸ್ವತ್ತಿನ ಖಾತೆದಾರರ ಹೆಸರು | ಶ್ರೀಮತಿ ಶಾಂತ ಕೋಂ ನಟರಾಜ್ |
| 4 | ಸ್ವತ್ತಿನ ವಿಸ್ತೀರ್ಣ ಚ.ಅಡಿಗಳಲ್ಲಿ | 1200 ಚ.ಅಡಿ |
| 5 | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ ಮತ್ತು ಚ.ಅಡಿ 1ಕ್ಕೆ ಇರುವ ಮಾರುಕಟ್ಟೆ ಬೆಲೆ.<br>ಕಾಂಪೌಂಡ್ ಗೋಡೆ ಮತ್ತು ಕಟ್ಟಡದ ಮುಖ್ಯಗೋಡೆಯನ್ನು ಹೊಡೆದು ಹಾಕರುವ ಬಗ್ಗೆ ವ್ಯಾಲ್ಯೂವೇಷನ್ | 200 ಚ.ಅಡಿ<br>2500=5,00,000 ರೂಗಳು<br>77,999 ರೂಗಳು<br>5,77,999/- |
| 6 | ಈ ಮೊಬಲಗಿಗೆ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎ ರನ್ವಯ ಶೇ.12% ಹೆಚ್ಚುವರಿ ಮಾರುಕಟ್ಟೆ ಬೆಲೆ 2 ವರ್ಷಕ್ಕೆ | 2 ವರ್ಷಕ್ಕೆ 1,38,719/- |
| 7 | ಭೂಸ್ವಾಧೀನಕಾಯ್ದೆಯ 23(2) ರನ್ವಯ ಶಾಸನಬದ್ಧ ಭತ್ಯೆ ಶೇ.30% | 1,79,399/- |
| ಒಟ್ಟು | | **8,96,117** |
| ಇತರೆ ವೆಚ್ಚಗಳು | | |
| 8 | ಸಿಬ್ಬಂದಿ ವೆಚ್ಚ | ಇಲ್ಲ |
| 9 | ಆಡಿಟ್ ವೆಚ್ಚ | ಇಲ್ಲ |
| 10 | ಪ್ರಕಟಣಾ ವೆಚ್ಚ | 1,00,000/- |
| | ಒಟ್ಟು (5+6+7+10) | **8,96,117/-** |
| ಷರಾ:- ದಿನಾಂಕ:05-09-1963 ರ ಕರ್ನಾಟಕ ಅಧಿಸೂಚನೆ ಸಂಖ್ಯೆ: ಎಫ್‌ಡಿ/126/ಆರ್.ಎಫ್.ಸಿ. 60 ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಗೆ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮಸಂಖ್ಯೆ 8 ಮತ್ತು 9 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ. | | |

**(ರೂ ಎಂಟು ಲಕ್ಷದ ತೊಂಭತ್ತಾರು ಸಾವಿರದ ನೂರ ಹದಿನೇಳು ಮಾತ್ರ)**

ಪ್ರಸ್ತಾಪಿತ ಸ್ವತ್ತನ್ನು 1894ನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. 8,96,117/- (ಎಂಟು ಲಕ್ಷದ ತೊಂಭತ್ತಾರು ಸಾವಿರದ ನೂರ ಹದಿನೇಳು ರೂಗಳು ಮಾತ್ರ) ಗಳನ್ನು ಪಾಲಿಕೆಯ 2013-14 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 24-04-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2013ರ ನಿರ್ಣಯ.

..........3

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (63)/2013-14

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 850 ಚದರ ಕಿಲೋ ಮೀಟರ್ ವಿಸ್ತೀರ್ಣವಿದ್ದು, ಸದರಿ ಪ್ರದೇಶದಲ್ಲಿ ನಕ್ಷೆ ಮಂಜೂರಾತಿ ಕೋರಿ ಸಾರ್ವಜನಿಕರು ಹಾಗೂ ನಿರ್ಮಾಣದಾರರು ಅರ್ಜಿ ಸಲ್ಲಿಸುತ್ತಿರುವುದು ಸರಿಯಷ್ಟೆ. ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿಯು ನಗರದ ಯೋಜನಾ ಬದ್ಧ ಬೆಳವಣಿಗೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲಿಸಿ ಸೂಕ್ತ ಮಾರ್ಗದರ್ಶನವನ್ನು ನೀಡುವುದು ಕೆ.ಎಂ.ಸಿ ಕಾಯ್ದೆ (296)ರ ಅಡಿಯಲ್ಲಿ ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿಗೆ ದತ್ತವಾಗಿರುವ ಅಧಿಕಾರಗಳನ್ನು ಈ ಕೆಳಕಂಡಂತೆ ವಿವರಿಸಿದೆ.

ಕೆ.ಎಂ.ಸಿ ಕಾಯ್ದೆ ಕಲಂ (296)ರಲ್ಲಿ ನಿರ್ದಿಷ್ಟ ಬೀದಿಗಳು ಅಥವಾ ಸ್ಥಳಗಳಲ್ಲಿ ಕಟ್ಟಡಗಳ ಕೆಲವು ವರ್ಗಗಳ ಬಾವಿ ನಿರ್ಮಾಣವನ್ನು ನಿಯಂತ್ರಿಸಲು ನಿಗಮದ ಅಧಿಕಾರ-(1) ನಿಗಮವು:-

ಎ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬೀದಿಗಳು ಅಥವಾ ಬೀದಿಗಳ ಭಾಗಗಳಲ್ಲಿ-

- ನಿರಂತರವಾಗಿ ಕಟ್ಟಡಗಳನ್ನು ಕಟ್ಟಲು ಅನುಮತಿಸಲಾಗುವುದು
- ಅನಂತರ ನಿರ್ಮಿಸಿದ ಅಥವಾ ಪುನ: ನಿರ್ಮಿಸಿದ ಕಟ್ಟಡಗಳ ಮುಂಭಾಗದ ಉನ್ನತ ನಕ್ಷೆ ಮತ್ತು ನಿರ್ಮಾಣವು ಅದಕ್ಕೆ ಸಂಬಂಧಿಸಿದ ವಾಸ್ತುಶಿಲ್ಪ ವೈಲಕ್ಷಣದ ಬಗ್ಗೆ ಸ್ಥಾಯಿ ಸಮಿತಿಯು ಆ ಸ್ಥಳಕ್ಕೆ ಸೂಕ್ತವೆಂದು ಪರಿಗಣಿಸಬಹುದಾದಂತಿರತಕ್ಕುದು ಎಂದು: ಅಥವಾ

ಬಿ) ನೋಟಿಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸ್ಥಳಗಳಲ್ಲಿ ಪ್ರತ್ಯೇಕಪಡಿಸಿದ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಅನುಮತಿಸಲಾಗುವುದೆಂದು: ಅಥವಾ

ಸಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳಗಳ ಯಾವುದೇ ಬೀದಿಗಳಲ್ಲಿ ಬೀದಿಗಳ ಭಾಗಗಳಲ್ಲಿ ನಿರ್ದಿಷ್ಟಪಡಿಸಿದ ವಾಸುಶಿಲ್ಪದ ಲಕ್ಷಣದ ಅಂಗಡಿಗಳು, ಉಗ್ರಾಣಗಳು, ಕಾರ್ಖಾನೆಗಳು, ಗುಡಿಸಲುಗಳು ಅಥವಾ ವಿಶಿಷ್ಟ ಉಪಯೋಗಗಳಿಗಾಗಿ ವಿನ್ಯಾಸಗೊಳಿಸಿದ ಕಟ್ಟಡಗಳ ನಿರ್ಮಾಣವನ್ನು ಸ್ಥಾಯಿ ಸಮಿತಿಯ ವಿಶೇಷ ಅನುಮತಿಯಿಲ್ಲದೆ ಅನುಮತಿಸಲಾಗುವುದಿಲ್ಲವೆಂದು.-

2) ಅಂಥ ನೋಟೀಸು ಪ್ರಕಟವಾದಂದಿನಿಂದ ಮೂರು ತಿಂಗಳುಗಳ ಅವಧಿಯ ತರುವಾಯ ಅಂಥ ಯಾವುದೇ ಘೋಷಣೆಯ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕುದಲ್ಲ.

3) ಸ್ಥಾಯಿ ಸಮಿತಿಯು, ಸದರಿ ಅವಧಿಯೊಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಪರ್ಯಾಲೋಚಿಸತಕ್ಕುದು. ಮತ್ತು ಅನಂತರ ಘೋಷಣೆಯನ್ನು ಸ್ಥಿರೀಕರಿಸಬಹುದು ಮತ್ತು ಹಾಗೆ ಮಾಡುವುದಕ್ಕೆ ಮೊದಲು ಅದನ್ನು ಮಾರ್ಪಾಡು ಮಾಡಬಹುದು. ಆದರೆ ಅದರ ಪರಿಣಾಮವನ್ನು ವಿಸ್ತರಿಸುವ ಹಾಗೆ ಮಾಡತಕ್ಕುದಲ್ಲ.

4) ಕಮೀಷನರನು ಹಾಗೆ ಸ್ಥಿರೀಕರಿಸಿದ ಯಾವುದೇ ಘೋಷಣೆಯನ್ನು ಪ್ರಕಟಿಸತಕ್ಕುದು ಮತ್ತು ಅದು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕುದು.

5) ಯಾವನೇ ವ್ಯಕ್ತಿಯು ಅಂಥ ಘೋಷಣೆಯು ಪ್ರಕಟವಾದ ದಿನಾಂಕದ ತರುವಾಯ ಅಂಥ ಯಾವುದೇ ಘೋಷಣೆಯನ್ನು ಉಲ್ಲಂಘಿಸಿ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕುದಲ್ಲ ಅಥವಾ ಪುನಃ ನಿರ್ಮಿಸತಕ್ಕುದಲ್ಲ.

ನಮೂದಿಸಿರುವಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ಬಹು ಅಂತಸ್ತಿನ ದೊಡ್ಡ ದೊಡ್ಡ ಮಾಲ್‌ಗಳು, ವಸತಿ ಸಮುಚ್ಚಯಗಳು, ವಾಣಿಜ್ಯ ಸಂಕೀರ್ಣಗಳು, ಮುಂತಾದವುಗಳಿಗೆ ನಕ್ಷೆ ಮಂಜೂರಾತಿಯನ್ನು ನೀಡುತ್ತಿರುವುದು

......................2

ಸರಿಯಷ್ಟೇ. ಆದರೆ ಸಮಿತಿಯ ಗಮನಕ್ಕೆ ಬರುತ್ತಿಲ್ಲ. ಕೆಲವು ಕಡೆಗಳಲ್ಲಿ ನೀಡಿರುವ ನಕ್ಷೆ ಮಂಜೂರಾತಿಯು ಅವೈಜ್ಞಾನಿಕ ಮತ್ತು ಮೇಲ್ಕಂಡ ಕೆ.ಎಂ.ಸಿ ಕಾಯ್ದೆಗೆ ವಿರುದ್ಧವಾಗಿದ್ದು, ಅಂದರೆ ಸಾರ್ವಜನಿಕ ಅನುಕೂಲಕ್ಕೆ ವಿರುದ್ಧವಾಗಿರುವ ಸ್ಥಳಗಳಲ್ಲಿ ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆ. ಅಂತಹ ಪ್ರಕರಣಗಳನ್ನು ಸ್ಥಳ ಪರಿಶೀಲಿಸಲು ಹೋದಾಗ ಚುನಾಯಿತ ಸದಸ್ಯರು ಮುಜುಗರ ಪಡುವಂತಾಗುತ್ತದೆ. ಆದಕಾರಣ, ಕಟ್ಟಡ ನಕ್ಷೆ ಮಂಜೂರಾತಿ ಕೋರಿ ಬರುವ ಪ್ರಕರಣಗಳು ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರ ಕೋರಿ ಬರುವ 50 ಘಟಕಗಳಿಗಿಂತ ಹೆಚ್ಚಿಗೆ ಇರುವ ವಸತಿ ಸಮುಚ್ಚಯ, ವಾಣಿಜ್ಯ ಕಟ್ಟಡಗಳು ಹಾಗೂ ಮಾಲ್‌ಗಳಿಗೆ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಪರಿಶೀಲನೆಗಾಗಿ ಸಮಿತಿಯ ತೀರ್ಮಾನಕ್ಕೆ ಕಳುಹಿಸಿದರೆ ಸಮಿತಿಯು ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಸೂಕ್ತವಾಗಿರುತ್ತದೆ.

ಈ ಕುರಿತು ದಿನಾಂಕ: 21-06-2011ರಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಆಧ್ಯಕ್ಷರ, ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಆಯುಕ್ತರ ಉಪಸ್ಥಿತಿಯಲ್ಲಿ ಬೆಳಿಗ್ಗೆ 11-00 ಗಂಟೆಗೆ ಪಾಲಿಕೆಯ ಸಭಾಂಗಣ-01ರಲ್ಲಿ ನಡೆದ ಸಭೆಯಲ್ಲಿ ಮಾನ್ಯ ಆಯುಕ್ತರು ಪಾಲಿಕೆಯ ವ್ಯಾಪ್ತಿಯಲ್ಲಿ ಯಾವುದೇ ಬಹು ಅಂತಸ್ತಿನ ದೊಡ್ಡ ದೊಡ್ಡ ಮಾಲ್‌ಗಳು, ವಸತಿ ಸಮುಚ್ಚಯಗಳು, ವಾಣಿಜ್ಯ ಸಂಕೀರ್ಣಗಳು, ಮುಂತಾದವುಗಳಿಗೆ ನಕ್ಷೆ ಮಂಜೂರಾತಿಯನ್ನು ನೀಡಬೇಕಾದರೆ ಅವುಗಳಿಗೆ ಸಂಬಂಧಪಟ್ಟ ಕಡತವನ್ನು ಸಮಿತಿಯ ಗಮನಕ್ಕೆ ಕಳುಹಿಸಿ ಸಮಿತಿಯವರ ಅನುಮೋದನೆಯನ್ನು ಪಡೆದು ನಕ್ಷೆಯನ್ನು ಮಂಜೂರು ಮಾಡುವ ಬಗ್ಗೆ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಪಡೆಯಲು ನಿರ್ಧರಿಸಲಾಗಿತ್ತು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕಟ್ಟಡ ನಕ್ಷೆ ಮಂಜೂರಾತಿ ಕೋರಿ ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರ ಕೋರಿ ಬರುವ 50 ವಸತಿ ಸಮುಚ್ಚಯ ಕಟ್ಟಡಗಳಿಗೆ ಮೇಲ್ಪಟ್ಟು ಹಾಗೂ 10 ಸಾವಿರ ಚದರ ಅಡಿ ವಿಸ್ತೀರ್ಣಕ್ಕಿಂತಲು ಮೇಲ್ಪಟ್ಟ (ಕಟ್ಟಡಗಳು) ಮಾಲ್‌ಗಳಿಗೆ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಪರಿಶೀಲನೆಗಾಗಿ ಕಳುಹಿಸಲು ಆಯುಕ್ತರವರಿಗೆ ನಿರ್ದೇಶನವನ್ನು ನೀಡುವ ಸಂಬಂಧ ಅನುಮೋದನೆ ಪಡೆಯಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ಸ್ವಯಂ ಪ್ರೇರಿತ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯನ್ನು ಪರಿಶೀಲಿಸಿ, ನಿಯಮಾನುಸಾರ ಆಯುಕ್ತರವರ ಮುಖೇನ ಸಮಿತಿ ಮತ್ತು ಸಭೆಯ ಮುಂದೆ ಅನುಮೋದನೆಗೆ ಮಂಡಿಸುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಪರಿಶೀಲಿಸಿ, ನಿಯಮಾನುಸಾರ ಆಯುಕ್ತರವರ ಮುಖೇನ ಸಮಿತಿ ಮತ್ತು ಸಭೆಯ ಮುಂದೆ ಅನುಮೋದನೆಗೆ ಮಂಡಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (120)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ. 137, ಜೆ.ಜೆ.ಆರ್.ನಗರ ವ್ಯಾಪ್ತಿಗೆ ಬರುವ ರಾಯನ್‌ಪುರಂನ 2ನೇ ಮುಖ್ಯರಸ್ತೆ, 6ನೇ ಮುಖ್ಯರಸ್ತೆಯ ನಿವೇಶನದ ಸಂಖ್ಯೆ: 65 ರ ಪಕ್ಕದಲ್ಲಿ 25X14 ಖಾಲಿ ಜಾಗದಲ್ಲಿ ಕಳೆದ 15 ವರ್ಷಗಳ ಹಿಂದೆ ಹರಿಜನ ಯುವಕ ಸೇವಾ ಸಮಾಜಂ (ರಿ) ರವರು ಕಛೇರಿಗೆ ಕಟ್ಟಡವನ್ನು ನಿರ್ಮಿಸಿದ್ದು, ಅನೇಕ ಪ್ರಗತಿಪರ ಚಟುವಟಿಕೆಗಳನ್ನು ನಡೆಸುತ್ತಿದ್ದು ಈ ಸಂಘದ ಕಛೇರಿಯ ಕಟ್ಟಡಕ್ಕೆ ಕಂದಾಯ ದಾಖಲೆಗಳನ್ನು ಮಾಡಿಕೊಡುವಂತೆ ಕೋರಿರುತ್ತಾರೆ.

ಸದರಿ ಸಂಘವು ಪ್ರಸ್ತುತ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡವನ್ನು ನಿರ್ಮಿಸಿ ಉಪಯೋಗಿಸುತ್ತಿದ್ದು, ಈ ಬಗ್ಗೆ ಪಾಲಿಕೆಯ ಕಛೇರಿಯಲ್ಲಿ ಯಾವುದೇ ದಾಖಲೆ ಇರುವುದಿಲ್ಲವೆಂದು ತಿಳಿಸಿ ಈಗ ಹೊಸದಾಗಿ ಸ್ವಾಧೀನಪತ್ರ ಮತ್ತು ಕ್ರಯಪತ್ರ ದಾಖಲೆಗಳನ್ನು ನೀಡಬೇಕಾಗಿರುತ್ತದೆ. ಮಾನ್ಯ ಆಯುಕ್ತರ ಆದೇಶದಂತೆ ಸದರಿ ಜಾಗವನ್ನು ಈಗಿನ ಮಾರುಕಟ್ಟೆ ದರದಲ್ಲಿ ನೀಡಲು ಆದೇಶಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 25X14=350 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ: 21.09.2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ. 1200/- ಗಳಿರುತ್ತದೆ. ಇದಕ್ಕೆ ಶೇ.20%ರಷ್ಟು ಹೆಚ್ಚಿಸಿದಾಗ 1440/- ಇದರಂತೆ ಲೆಕ್ಕಾಚಾರ ಮಾಡಲಾಗಿ, ರೂ.1440x350=5,04,000/- ಗಳು ಒಟ್ಟು ಮೊತ್ತಗಳಾಗುತ್ತದೆ.

ದಿನಾಂಕ: 01.03.2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಹರಿಜನ ಯುವಕ ಸೇವಾ ಸಂಘ ಸಮಾಜಂ (ರಿ), ರವರಿಗೆ ನಗರ ಪಾಲಿಕೆ ಜಾಗವನ್ನು ಈಗಿನ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ತಾಯಿ ಸಮಿತಿಯ ದಿನಾಂಕ:01-10-2013ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಪ್ರಸ್ತಾಪಿತ ಜಾಗವನ್ನು ಪ್ರಸ್ತುತ ಮಾರುಕಟ್ಟೆ ದರದ ಶೇ.10% ರ ದರವನ್ನು ನಿಗಧಿಪಡಿಸಿ ಕ್ರಯಕ್ಕೆ ನೀಡಲು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (143)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಭಾರತೀಯ ವಿದ್ಯಾಭವನ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಯೋಗದೊಂದಿಗೆ ಶ್ರೀರಾಮಪುರದಲ್ಲಿ ಪಬ್ಲಿಕ್ ಶಾಲೆಯನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ ಶಾಲೆಯನ್ನು ಪ್ರಾರಂಭಿಸುವ ಮೊದಲು ದಿನಾಂಕ:12-11-2007 ರಂದು 15 ವರ್ಷಗಳ ಅವಧಿಗೆ (12-11-2007 ರಿಂದ 25-11-2022) ಒಡಂಬಡಿಕೆ ಮಾಡಿಕೊಂಡು ಸದರಿ ಶಾಲೆಯನ್ನು ಮುಂದುವರೆಸಲಾಗುತ್ತಿದೆ. ಸದರಿ ಶಾಲೆಗೆ ಪೋಷಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ.

ದಿನಾಂಕ:10-01-2013 ರಂದು ಭಾರತೀಯ ವಿದ್ಯಾಭವನ ರವರು ಪತ್ರವನ್ನು ಬರೆದು ಸಿ.ಬಿ.ಎಸ್.ಸಿ. ನಿಯಮ ಹಾಗೂ ಕಾಯ್ದೆಯಂತೆ ಗುತ್ತಿಗೆಯ ಅವಧಿಯನ್ನು 15 ವರ್ಷಗಳಿಂದ 30 ವರ್ಷಗಳಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ. ಸದರಿ ಪತ್ರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದ ಶ್ರೀ. ಸುರೇಶ್ ಕುಮಾರ್ ರವರು ಗುತ್ತಿಗೆಯ ಅವಧಿಯನ್ನು 15 ರಿಂದ 30 ವರ್ಷಕ್ಕೆ ವಿಸ್ತರಿಸಲು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರು ಈ ಕೆಳಕಂಡಂತೆ ಅಭಿಪ್ರಾಯಪಟ್ಟಿರುತ್ತಾರೆ. ಕಡತದಲ್ಲಿ ಲಗತ್ತಿಸಿರುವ 5ನೇ ಪುಟದ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ ಸಂಯೋಜನೆಯ ಬೈಲಾ ಪ್ರತಿಯಲ್ಲಿ ಶಾಲಾ ನಡೆಸಲು ಈ ಕೆಳಕಂಡ ಷರತ್ತನ್ನು ವಿಧಿಸಿದ್ದು,

"In metropolitan cities with a population exceeding 25 lacs, the land should not be less than one acres with adequate building & arrangement with other institution/organization for imparting physical & health education and for conducting games, to the satisfaction of the Board. In case of lease, it will be accepted if it is for at least 30 years. **Provided further that in case of any portion which is leased out below 30 years, such case may be considered provided that land has been allotted by the Government or Government** agencies and it is as per the law of the land. In all such cases school should have at least one acre of alnd by ownership or by lease for 30 years and in all case the total land area should not be less that about 2 acres".

ಕೆ.ಎಂ.ಸಿ. ಕಾಯ್ದೆ ಕಲಂ 176ರ ಅನ್ವಯ ಸರ್ಕಾರದ ಅನುಮೋದನೆ ಇಲ್ಲದೆ ಯಾವುದೇ ಸ್ಥಿರಾಸ್ತಿಗಳನ್ನು 5 ವರ್ಷಗಳಿಗೆ ಮೇಲ್ಪಟ್ಟು ನೀಡತಕ್ಕದ್ದಾಗಿರುವುದಿಲ್ಲ.

ಆದ ಮೇರೆಗೆ ಪ್ರಸ್ತಾಪಿತ ವಿಷಯದ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:16-08-2013ರ ಟಿಪ್ಪಣಿ ಹಾಗೂ ಗುತ್ತಿಗೆ ಅವಧಿಯನ್ನು ವಿಸ್ತರಿಸುವ ವಿಷಯವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವ್ಯಾಪ್ತಿಗೆ ಬರುವುದರಿಂದ ಈ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೌನ್ಸಿಲ್ ಕಾರ್ಯಾಲಯಕ್ಕೆ ಹಿಂದಿರುಗಿಸಲು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ:09-10-2013ರ ನಿರ್ಣಯ ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:16-08-2013ರ ಟಿಪ್ಪಣಿಯನ್ನು ಒಪ್ಪುತ್ತಾ, ಗುತ್ತಿಗೆಯ ಅವಧಿಯನ್ನು ಮೂವತ್ತು (30) ವರ್ಷಗಳ ಅವಧಿಗೆ ನಿಗಧಿಪಡಿಸಿ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-11-2013ರ ನಿರ್ಣಯ.

..............2

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-11-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 26-11-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (144)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಿಕ್ಕಪೇಟೆ ವಲಯ ವ್ಯಾಪ್ತಿಗೆ ಬರುವ ವಾರ್ಡ್-109 ರಲ್ಲಿನ ಆರ್ಮುಗಂ ಮೊದಲಿಯಾರ್ ಲೇನ್ (ಎ.ಎಂ.ಲೇನ್), 1ನೇ ಕ್ರಾಸ್‌ನಲ್ಲಿರುವ ಎಲ್ ಆಕಾರದಲ್ಲಿರುವ 10x6 ಅಡಿಗಳ ಖಾಲಿ ಜಾಗದಲ್ಲಿ ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡಲು ಗುತ್ತಿಗೆಗೆ ನೀಡುವಂತೆ ಕೋರಿ ಶ್ರೀಮತಿ.ಪಿ.ಎಲ್.ವಸುಂಧರ ರವರು ದಿನಾಂಕ:20.05.2011 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕಾಟನ್‌ಪೇಟೆ) ಉಪ ವಿಭಾಗದವರು ಸ್ಥಳ ಪರಿಶೀಲಿಸಿ ಸದರಿ ಜಾಗವು ಮೂಲೆ ನಿವೇಶನವಾಗಿದ್ದು ಹಾಗೂ ಬಿವಿಕೆ ಅಯ್ಯಂಗಾರ್ ರಸ್ತೆಗೆ ಅಭಿಮುಖವಾಗಿರುತ್ತದೆ. ಸದರಿ ಜಾಗದಲ್ಲಿರುವ 10ಥ6 ಅಡಿಗಳ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದಾಗಿ ವಲಯಾಧಿಕಾರಿಗಳು ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 10ಥ6=60 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.7500/- ಗಳಿರುತ್ತದೆ. ಇದಕ್ಕೆ ಶೇ 40% ರಷ್ಟು ಹೆಚ್ಚಿಸಿದಾಗ 10500/- ಇದರಂತೆ ಲೆಕ್ಕಾಚಾರ ಮಾಡಲಾಗಿ, 10500x60=630000/- ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.63000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.5250/- ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002 ಬೆಂಗಳೂರು ದಿನಾಂಕ:02-06-2003ರಲ್ಲಿನ ಕ್ರಮ ಸಂಖ್ಯೆ vi) ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿದೆ.

ಈ ಹಿನ್ನೆಲೆಯಲ್ಲಿ ಮೇಲೆ ನಮೂದಿಸಿರುವ ಸ್ಥಳವನ್ನು ಹರಾಜು ಮುಖಾಂತರ ಮಾರಾಟ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 12.02.2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26.11.2013ರ ನಿರ್ಣಯ ಹಾಗೂ ದಿನಾಂಕ:26-11-2013ರ ನಗರ ಯೋಜನೆ ಮತ್ತು ಅಬಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಮಾರ್ಪಡಿಸುತ್ತಾ, ಸದರಿ ವಾರ್ಡಿನ ಪಾಲಿಕೆಯ ಸದಸ್ಯರು ಅರ್ಜಿದಾರರು ಸದರಿ ಸ್ಥಳದಲ್ಲಿ 30 ವರ್ಷಗಳಿಂದ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದಾಗಿ ತಿಳಿಸಿದ್ದು, ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಸದರಿಯವರಿಗೆ 5 ವರ್ಷಗಳ ಅವಧಿಗೆ ಟಿಪ್ಪಣಿಯಲ್ಲಿ ತಿಳಿಸಿರುವ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಗುತ್ತಿಗೆಗೆ ನೀಡುವುದೆಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮಾಸಿಕ ಗುತ್ತಿಗೆ ಮೊತ್ತ ರೂ.5250/- ಗಳನ್ನು ನಿಗಧಿಪಡಿಸಿ, ವಾರ್ಷಿಕ ಶೇಕಡ 10 ರಷ್ಟು ಗುತ್ತಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತಿನೊಂದಿಗೆ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದು ಸಭೆಯು ತೀರ್ಮಾನಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದು".

.............................2

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಮಾಸಿಕ ಗುತ್ತಿಗೆ ಮೊತ್ತ ರೂ.5250/– ಗಳನ್ನು ನಿಗಧಿಪಡಿಸಿ, ವಾರ್ಷಿಕ ಶೇಕಡ 10 ರಷ್ಟು ಗುತ್ತಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತಿನೊಂದಿಗೆ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದು ಸಭೆಯು ತೀರ್ಮಾನಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23–12–2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (145)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜೆ.ಜೆ.ಆರ್.ನಗರ ವಲಯ ವಾರ್ಡ್ ನಂ.137. ರಾಯಪುರಂ, ವಾರ್ಡಿನ ವ್ಯಾಪ್ತಿಯಲ್ಲಿ ಬರುವ ನಗರ ಪಾಲಿಕೆಯ ಸಮುದಾಯ ಭವನ, ನಂ.5, 10ನೇ ಮುಖ್ಯರಸ್ತೆ, ವೆಂಕಟಸ್ವಾಮಿ ತೋಟ, ವಿಸ್ತೀರ್ಣ 40x78=3120 ಚದರ ಅಡಿಗಳ ಅಳತೆಯ ಭವನವನ್ನು 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವಂತೆ ಕೋರಿ ಮಾತಾಶ್ರೀ. ದೊಡ್ಡಮ್ಮ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷರು ಮನವಿ ಸಲ್ಲಿಸಿರುತ್ತಾರೆ ಹಾಗೂ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ.ಬಿ.ಜೆಡ್.ಜಮೀರ್ ಅಹಮದ್ ಖಾನ್ ರವರು ಸಹಾ ಶಿಫಾರಸ್ಸು ಪತ್ರ ನೀಡಿರುತ್ತಾರೆ. ಸದರಿ ಆಸ್ತಿಯ ಅಳತೆ ನಕ್ಷೆ ಹಾಗೂ ಸದರಿ ಜಾಗದಲ್ಲಿ ವಿವಿಧ ಅಳತೆಗಳಿಗೆ ನಿರ್ಮಿತವಾಗಿರುವ ನೆಲ ಅಂತಸ್ತು, 1ನೇ ಅಂತಸ್ತುಗಳ ಬಗ್ಗೆ ಕಾಮಗಾರಿ ಇಲಾಖೆಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜೆ.ಜೆ.ಆರ್.ನಗರ) ರವರು ವರದಿ ನೀಡಿರುತ್ತಾರೆ. ಸದರಿ ಜಾಗವು ನಗರ ಪಾಲಿಕೆಯ ಕಂದಾಯ ಇಲಾಖೆ ಪುಸ್ತಕದಲ್ಲಿ ಮುನಿಸಿಪಲ್ ಸಂಖ್ಯೆ:5, 10ನೇ ಮುಖ್ಯರಸ್ತೆ, ವೆಂಕಟಸ್ವಾಮಿ ತೋಟ ಎಂಬುದಾಗಿ ನಗರ ಪಾಲಿಕೆಯ ಜಾಗವೆಂದು ದಾಖಲಿಸಲಾಗಿದೆ.

ದಿನಾಂಕ:20-04-2011 ರಂದು ಸಹಾಯಕ ಆಯುಕ್ತರು (ಆಸ್ತಿಗಳು) ರವರು ಸ್ಥಳೀಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿದ್ದು, ಸದರಿ ನಗರ ಪಾಲಿಕೆಯ ಭವನವನ್ನು ಮಾತಾಶ್ರೀ. ದೊಡ್ಡಮ್ಮ ದೇವಸ್ಥಾನ ಟ್ರಸ್ಟ್‌ಗೆ ಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ಷರತ್ತಿಗೆ ಒಳಪಟ್ಟು ಗುತ್ತಿಗೆ ನೀಡುವುದು ಸೂಕ್ತ ಎಂಬ ವರದಿ ನೀಡಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:15-09-2011 ರಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-11-2011ರ ಸಭೆಯಲ್ಲಿ ಸದರಿ ನಗರ ಪಾಲಿಕೆಯ ಸಮುದಾಯ ಭವನವು ಪಾಲಿಕೆಯ ವಶದಲ್ಲಿರುವುದೇ ಸೂಕ್ತವಾಗಿದ್ದು, 2007 ರಿಂದ ಇಲ್ಲಿಯವರೆಗೆ ಸಮುದಾಯ ಭವನದಿಂದ ಬಂದಿರುವ ಆದಾಯದ ಬಗ್ಗೆ ಸಂಪೂರ್ಣವಾದ ಮಾಹಿತಿಯೊಂದಿಗೆ ಹಾಗೂ ಪಾಲಿಕೆಗೆ ಸದರಿ ಕಟ್ಟಡದ ಅವಶ್ಯಕತೆ ಇದೆಯೇ ಇಲ್ಲವೇ ಎಂಬುದರ ಬಗ್ಗೆ ಪರಿಶೀಲಿಸಿ ಮರು ಮಂಡಿಸಲು ತೀರ್ಮಾನಿಸಲಾಗಿರುತ್ತದೆ.

ಈ ಸಮುದಾಯ ಭವನದಿಂದ ನಗರ ಪಾಲಿಕೆಗೆ ಯಾವುದೇ ಆದಾಯ ಬರುತ್ತಿಲ್ಲ ಮತ್ತು ಅನಧಿಕೃತವಾಗಿ ಕೆಲವು ಕುಟುಂಬಗಳು ವಾಸಿಸುತ್ತಿದ್ದಾರೆ. ಕಟ್ಟಡದ ನಿರ್ವಹಣೆ ಇಲ್ಲದಂತಾಗಿರುತ್ತದೆ. ಸದರಿ ಕಟ್ಟಡವನ್ನು ಪಾಲಿಕೆಯ ವಶಕ್ಕೆ ವಹಿಸಿಕೊಂಡಲ್ಲಿ ಅದನ್ನು ನಿರ್ವಹಿಸಲು ಸೂಕ್ತ ಸಿಬ್ಬಂದಿಯನ್ನು ನೇಮಿಸಿ, ಮೂಲಭೂತ ಸೌಕರ್ಯಗಳನ್ನು ಒದಗಿಸಿ ಮದುವೆ ಮತ್ತು ಇತರೆ ಸಮಾರಂಭಗಳಿಗೆ ನೀಡಬಹುದಾಗಿದೆ. ಆದರೆ ಇದರ ವೆಚ್ಚವನ್ನು ಗಮನಿಸಿದರೆ ಇದೊಂದು ಲಾಭದಾಯಕ ಅಂಶ ಆಗಿರುವುದಿಲ್ಲ. ಕಾರಣ ಈ ಸಮುದಾಯ ಭವನವು ಬಹಳ ಇಕ್ಕಟ್ಟಾದ ರಸ್ತೆಯಲ್ಲಿದ್ದು, ಇಲ್ಲಿ ಬಹುತೇಕ ಎಸ್.ಸಿ/ಎಸ್.ಟಿ ಪಂಗಡದವರೇ ಇದ್ದು, ಯಾವುದೇ ಹೆಚ್ಚಿನ ಆದಾಯ ನಿರೀಕ್ಷಿಸಲಾಗದು. ಈ ದಿಶೆಯಲ್ಲಿ ಇದಕ್ಕೆ ಹೊಂದಿಕೊಂಡಿರುವ ಮಾತಾಶ್ರೀ.ದೊಡ್ಡಮ್ಮ ದೇವಸ್ಥಾನದವರು ಇದನ್ನು ನಿರ್ವಹಣೆ ಮಾಡಲು ಕೋರಿಕೆ ಸಲ್ಲಿಸಿರುತ್ತಾರೆ.

ಆದ್ದರಿಂದ ಸಮುದಾಯ ಭವನವನ್ನು ಪಾಲಿಕೆಯಿಂದ ನಿರ್ವಹಿಸಲು ಕಷ್ಟ ಸಾಧ್ಯ ಆಗಿರುವುದರಿಂದ ಸದರಿ ದೇವಸ್ಥಾನಕ್ಕೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಒಪ್ಪಬಹುದಾಗಿದೆ. ಮುಂದೆ ಕಟ್ಟಡದ ನಿರ್ವಹಣೆ ಮಾಡಲು ಸದರಿ ಟ್ರಸ್ಟ್ ರವರಿಗೆ ಸೂಚಿಸಬಹುದು ಮತ್ತು ಈ ಸಮುದಾಯ ಭವನದಿಂದ ಬರುವ ಆದಾಯದಲ್ಲಿ ಪಾಲಿಕೆಗೆ ಶೇ 50% ರಷ್ಟು ನೀಡಲು ಸಂಸ್ಥೆಯವರಿಗೆ ತಿಳಿಸಬಹುದು ಅಥವಾ ವಾರ್ಷಿಕ ಒಂದು ಮೊತ್ತವನ್ನು

.......2

ನಿಗಧಿಪಡಿಸಿ ದೇವಸ್ಥಾನದ ಆಡಳಿತ ಮಂಡಳಿ ವಶಕ್ಕೆ ನೀಡಬಹುದೆಂದು ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ ಹಾಗೂ ಸಮುದಾಯ ಭವನವು ಪಾಲಿಕೆಯ ಯಾವುದೇ ರೀತಿಯ ಬಳಕೆಗೆ ಅವಶ್ಯವಿಲ್ಲವೆಂದು ವರದಿ ಮಂಡಿಸಿರುವುದರಿಂದ ಇದನ್ನು ಸಾರ್ವಜನಿಕ ಹರಾಜು ಮೂಲಕವೇ ಮಾರಾಟ ಮಾಡಲು ಪಾಲಿಕೆಯ ಸಭೆಯ ಮುಂದೆ ಟಿಪ್ಪಣಿ ಮಂಡಿಸುವಂತೆ ಮಾನ್ಯ ವಿಶೇಷ ಆಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ:21-09-2011 ರಂತೆ ಲೆಕ್ಕಾಚಾರ ಮಾಡಲಾಗಿ 40x78=3120 ಚದರ ಅಡಿಗಳಾಗಿದ್ದು ಚದರ ಅಡಿ ಒಂದಕ್ಕೆ ರೂ.1200/- ನಿಗದಿಪಡಿಸಿರುವ ದರದಂತೆ 1200x3120=37,44,000/- ರೂ ಒಟ್ಟು ಮೊತ್ತವಾಗಿದ್ದು, ಹಾಗೂ ಕಟ್ಟಡದ ವಿಸ್ತೀರ್ಣ ಮೊದಲನೆ ಅಂತಸ್ತು 1800 ಚದರಡಿ, ಎರಡನೆಯ ಅಂತಸ್ತು 1800 ಚದರಡಿ ಒಟ್ಟು 3600 ಚದರಡಿ ಇದ್ದು, ಇದರಂತೆ ಲೆಕ್ಕಾಚಾರ ಮಾಡಲಾಗಿ 3600x800=28,80,000/- ರೂ ಗಳಾಗುತ್ತದೆ. ಇದರಂತೆ ನಿವೇಶನ ಮತ್ತು ಕಟ್ಟಡದ ಒಟ್ಟು ಮೌಲ್ಯ 28,80,000+37,44,000=66,24,000/- ಗಳಾಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ 6,62,400/- ರೂ ಗಳಾಗಲಿದ್ದು, ಮಾಸಿಕ ಗುತ್ತಿಗೆ ದರ ರೂ.55,200/-ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತನ್ನು ಸಾರ್ವಜನಿಕ ಹರಾಜು ಮುಖಾಂತರ ವಿಲೇವಾರಿ ಮಾಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನ ಕೋರಿ ಮಂಡಿಸಲಾಗಿರುವ ಆಯುಕ್ತರವರ ದಿನಾಂಕ:30.05.2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಗಿ ಸದರಿ ಸ್ವತ್ತನ್ನು ಮೂವತ್ತು (30) ವರ್ಷಗಳ ಬದಲಾಗಿ ಐದು (5) ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26.11.2013ರ ನಿರ್ಣಯ ಹಾಗೂ ದಿನಾಂಕ:26-11-2013ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.2000/- (ರೂಪಾಯಿ ಎರಡು ಸಾವಿರ ಮಾತ್ರ)ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (146)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್-119, ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿ 5300 ಚ.ಅಡಿ ಪಾಲಿಕೆ ನಿವೇಶನವನ್ನು ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರೀಯ) ಸಂಘ ರವರಿಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರ ದಿನಾಂಕ:18-10-2011ರ ವಿಷಯದ ಸಂಖ್ಯೆ:ನಯೋಆಸ್ಥಾಸ/108/ 11-12 ರಲ್ಲಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿ:07-12-2011ರ ವಿಷಯ ಸಂಖ್ಯೆ:ತೆಆಸ್ಥಾಸ/359/11-12 ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಪಾಲಿಕೆ ಸಭೆಯು ದಿನಾಂಕ:27-12-2011ರ ವಿಷಯದ ಸಂಖ್ಯೆ:31 (271)/2011-12 ರಲ್ಲಿ ಮಾಸಿಕ 10000/- ರೂ. ಗುತ್ತಿಗೆ ಹಣ ನಿಗಧಿಪಡಿಸಿ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವುದು ಸರಿಯಷ್ಟೆ.

ಮಾನ್ಯ ಮಾಜಿ ಉಪ ಮಹಾಪೌರರಾದ ಶ್ರೀ ಎಸ್.ಹರೀಶ್ ರವರು ಪತ್ರವನ್ನು ಸಲ್ಲಿಸಿ, ಕರಗ ಭವನ ನಿರ್ಮಿಸುವ ಪ್ರದೇಶ ಒಟ್ಟು 5300 ಚದರಡಿಗಳ ಖಾಲಿ ಜಾಗದಲ್ಲಿ 2586 ಚದರಡಿಗಳ ಜಾಗದಲ್ಲಿ ಕಸ ಸಂಗ್ರಹಣೆ ಮಾಡುತ್ತಿದ್ದು, ಒಟ್ಟು 5300 ಚದರಡಿಗಳಲ್ಲಿ 2586 ಚದರಡಿಗಳನ್ನು ಹೊರತುಪಡಿಸಿ ಉಳಿದ 2714 ಚದರ ಅಡಿ ಜಾಗವನ್ನು ಗುತ್ತಿಗೆ ನೀಡಬಹುದೆಂದು ಹಾಗೂ ಗುತ್ತಿಗೆ ನೀಡಲಾಗಿರುವ ಪ್ರದೇಶವನ್ನು ಕರಗಭವನ ನಿರ್ಮಾಣ ಹೊರತುಪಡಿಸಿ, ಬೇರೆ ಯಾವುದೇ ವಾಣಿಜ್ಯ ವ್ಯವಹಾರಗಳಿಗೆ ಉಪಯೋಗಿಸಬಾರದೆಂದು ಷರತ್ತನ್ನು ಅಳವಡಿಸಿ ಕರಾರು ಪತ್ರವನ್ನು ಮಾಡಿಕೊಡಲು ತಿಳಿಸಿರುತ್ತಾರೆ.

ಆದುದರಿಂದ, ಸದರಿ ಜಾಗದಲ್ಲಿ ಲಭ್ಯವಿರುವ 5300 ಚದರ ಅಡಿಗಳ ಜಾಗದ ವಿಸ್ತೀರ್ಣದಲ್ಲಿ 2586 ಚದರ ಅಡಿಗಳನ್ನು ಹೊರತುಪಡಿಸಿ ಉಳಿಕೆ 2714 ಚದರ ಅಡಿಗಳನ್ನು ಕರಗಭವನ ನಿರ್ಮಾಣಕ್ಕಾಗಿ ಮಾತ್ರ ಸೀಮಿತಗೊಳಿಸುವುದು ಹಾಗೂ ಇತರೆ ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸಬಾರದೆಂಬ ಷರತ್ತು ಅಳವಡಿಸಿ ಗುತ್ತಿಗೆಗೆ ನೀಡಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ) ರವರಿಗೆ ಈ ಹಿಂದೆ ಗುತ್ತಿಗೆಗೆ ನೀಡಿದ್ದ ವಿಸ್ತೀರ್ಣವನ್ನು ಕಡಿಮೆಗೊಳಿಸಿ 2714 ಚದರ ಅಡಿಗಳನ್ನು ಗುತ್ತಿಗೆ ಹಣ ನಿಗಧಿಪಡಿಸಿ ಗುತ್ತಿಗೆ ನೀಡಲು ಪರಿಷ್ಕೃತ ನಿರ್ಣಯ ಹೊರಡಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರಪಾಲಿಕೆ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿತ್ತು. ಪಾಲಿಕೆ ಸಭೆ ದಿನಾಂಕ:30-10-2012 ರ ವಿಷಯದ ಸಂಖ್ಯೆ:12(253)/2012-13 ರಲ್ಲಿ ಪಾಲಿಕೆ ಸಭೆ ದಿನಾಂಕ:27-12-2011ರ ವಿಷಯ ಸಂಖ್ಯೆ:31(271)/2011-12 ರಲ್ಲಿ ಪೂರ್ಣ 5300 ಚ.ಅಡಿ ನಿವೇಶನವನ್ನು ಮಾಸಿಕ ರೂ.10,000/- ಗುತ್ತಿಗೆ ಹಣ ನಿಗಧಿಪಡಿಸಿ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಆದರೆ, ಇದು ಹೊಸದಾಗಿ ಗುತ್ತಿಗೆಗೆ ನೀಡಲು ಕೋರಿರುವ ಪ್ರಕರಣವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02-06-2003ರ ಸುತ್ತೋಲೆ ಕ್ರಮ ಸಂಖ್ಯೆ: VI ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದೆಂದಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.4200/-ಗಳಿದ್ದು, ಪ್ರಸ್ತುತ ಜಾಗವು 5300 ಚ.ಅಡಿಗಳಾಗಿದ್ದು, ಇದರಂತೆ 5300×4200 = 2,22,60,000/- ರೂಗಳಾಗುತ್ತದೆ. ಸರ್ಕಾರಿ

ಮಾರ್ಗಸೂಚಿಯಂತೆ ವಾಣಿಜ್ಯ ಉದ್ದೇಶಕ್ಕೆ ಶೇಕಡ 40ರಷ್ಟು + ಮೂಲೆ ನಿವೇಶನಕ್ಕೆ ಶೇಕಡ 10ರಷ್ಟು ಹೆಚ್ಚಿಸಿ ಲೆಕ್ಕಾಚಾರ ಮಾಡಿದಾಗ ರೂ.3,33,90,000/- ಗಳಷ್ಟು ಮೊತ್ತ ಆಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 33,39,000/- ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 2,78,250/- ರೂ.ಗಳಾಗುತ್ತದೆ.

ಆದರೆ, ಸದರಿ ನಿವೇಶನಕ್ಕೆ ಮಾಸಿಕ ಗುತ್ತಿಗೆ ಹಣ 10,000/-ರೂ. ನಿಗಧಿಪಡಿಸಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಪರಿಸ್ಥಿತಿ ಗಂಭೀರವಾಗಿರುವುದರಿಂದ ಈ ನಿವೇಶನಕ್ಕೆ ನಿಗಧಿಪಡಿಸಿರುವ ಗುತ್ತಿಗೆ ದರ ಸಮಂಜಸವಾಗಿರುವುದಿಲ್ಲವೆಂದು ಅಭಿಪ್ರಾಯಿಸಿ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಸೂಕ್ತ ಆದೇಶ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಮಾನ್ಯ ಸರ್ಕಾರವು ಈ ಪ್ರಸ್ತಾವನೆ ಪರಿಶೀಲಿಸಿ ತನ್ನ ಪತ್ರದ ಸಂಖ್ಯೆ: ನಅಇ 94 ಎಂಎನ್‌ಜಿ 2010 ದಿನಾಂಕ:11-03-2013 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆರ್ಥಿಕ ಪರಿಸ್ಥಿತಿ ತೀರಾ ಕ್ಲಿಷ್ಟಕರವಾಗಿದ್ದು, ದೈನಂದಿನ ಕಾರ್ಯಗಳಿಗಾಗಿ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯಲು ತನ್ನ ಸ್ಥಿರಾಸ್ತಿಯನ್ನು ಅಡಮಾನವಿಡುವಂತಹ ಪರಿಸ್ಥಿತಿ ಒದಗಿದೆ. ಪ್ರಶ್ನಿತ ನಿವೇಶನಕ್ಕೆ ಮಾಸಿಕ ಗುತ್ತಿಗೆ ಹಣ ರೂ.2,78,250/- ರೂಪಾಯಿಗಳ ಬದಲಿಗೆ ಕೇವಲ 10000/- ಗಳನ್ನು ಪಾಲಿಕೆಯು ನಿಗಧಿಪಡಿಸಿದ್ದು, ಬಿಬಿಎಂಪಿಯ ಆರ್ಥಿಕ ಪರಿಸ್ಥಿತಿ ಗಂಭೀರವಾಗಿರುವುದರಿಂದ, ಈ ನಿವೇಶನಕ್ಕೆ ನಿಗಧಿಪಡಿಸಿರುವ ಗುತ್ತಿಗೆ ದರ ಸಮಂಜಸವಾಗಿರುವುದಿಲ್ಲ. ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಸರ್ಕಾರದ ಸೂಕ್ತ ಆದೇಶ ಕೋರಿರುವ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಮರುಪರಿಶೀಲನೆಗಾಗಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ಆದೇಶಿಸಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/ 2002, ಬೆಂಗಳೂರು, ದಿನಾಂಕ: 02-06-2003ರ ಸುತ್ತೋಲೆ ಕ್ರಮ ಸಂಖ್ಯೆ: VI ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:15-06-2013 ರ ಟಿಪ್ಪಣಿ ಹಾಗೂ ಸದರಿ ಸ್ವತ್ತನ್ನು ಸಾರ್ವಜನಿಕ ಹರಾಜು ಮುಖಾಂತರ ನೀಡುವ ಮಾನ್ಯ ಆಯುಕ್ತರ ದಿನಾಂಕ:15.06.2013ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26.11.2013ರ ನಿರ್ಣಯ ಹಾಗೂ ದಿನಾಂಕ:26-11-2013ರ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಮಾರ್ಪಡಿಸುತ್ತಾ, ಈಗಾಗಲೇ ಪಾಲಕೆಯ ಸಭೆಯಲ್ಲಿ ದಿನಾಂಕ:27-12-2011ರಂದು 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿದ್ದು, ಅದರಂತೆ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಹಾಗೂ ಮಾಸಿಕ ಗುತ್ತಿಗೆ ಮೊತ್ತ ರೂ.15000/-(ರೂಪಾಯಿ ಹದಿನೈದು ಸಾವಿರಗಳು ಮಾತ್ರ) ಗಳನ್ನು ನಿಗಧಿಪಡಿಸುವುದೆಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ 30 ವರ್ಷಗಳಿಗೆ ಗುತ್ತಿಗೆ ಕೊಡುವುದಕ್ಕೆ ಸರ್ಕಾರಕ್ಕೆ ಕಳುಹಿಸುವುದೆಂದು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "30 ವರ್ಷಗಳಿಗೆ ಗುತ್ತಿಗೆ ಕೊಡುವುದಕ್ಕೆ ಸರ್ಕಾರಕ್ಕೆ ಕಳುಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 27 (152)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:12-09-2013 ರಂದು ಸಂಪನ್ಮೂಲ ಕ್ರೂಢೀಕರಣ ಸಭೆಯಲ್ಲಿ ಪೂಜ್ಯ ಮಹಾಪೌರರು ಸೂಚಿಸಿರುವ ಮೇರೆಗೆ ಅಂಗಡಿ ಮುಂಗಟ್ಟುಗಳ ಮೇಲೆ ಪ್ರದರ್ಶಿಸಲ್ಪಡುತ್ತಿರುವ ಜಾಹೀರಾತು ಫಲಕಗಳ ಜಾಹೀರಾತು ಶುಲ್ಕ ವಸೂಲಾತಿ ಕುರಿತು ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಲಾಗಿದೆ.

1) ಮೊದಲನೆಯದಾಗಿ ಸದರಿ ಶುಲ್ಕ ವಸೂಲಾತಿ ಕಾರ್ಯವನ್ನು ವಿಕೇಂದ್ರಿಕರಣಗೊಳಿಸಿ, ಪಾಲಿಕೆಯ 64 ಸಹಾಯಕ ಕಂದಾಯ ಅಧಿಕಾರಿ ಉಪ ವಲಯಗಳಿಗೆ ವಹಿಸುವ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಈಗಾಗಲೇ ಜಾಹೀರಾತು ವಿಭಾಗದ ಕೆಲಸ ಕಾರ್ಯಗಳನ್ನು ವಿಕೇಂದ್ರಿಕರಣಗೊಳಿಸಿ ಸಂಬಂಧಪಟ್ಟ ವಲಯಗಳಿಗೆ ವಹಿಸಲಾಗಿದ್ದು, ಅಂಗಡಿ ಮುಂಗಟ್ಟುಗಳ ಜಾಹೀರಾತು ಶುಲ್ಕ ವಸೂಲಾತಿ ಕಾರ್ಯವು ಕಡೆಗಣಿಸಲ್ಪಟ್ಟಿದ್ದು, ಬಹಳ ಅಲ್ಪ ಮೊತ್ತದ ವಸೂಲಾತಿ ಆಗಿರುತ್ತದೆ, ವಾರ್ಷಿಕವಾರು ವಸೂಲಾತಿ ಮೊತ್ತದ ವಿವರ ಈ ಕೆಳಕಂಡಂತಿದೆ;

| ವರ್ಷ | ಪೂರ್ವ | ಪಶ್ಚಿಮ | ದಕ್ಷಿಣ | ಮಹದೇವಪುರ | ರಾ.ರಾ. ನಗರ | ಬೊಮ್ಮನ ಹಳ್ಳಿ | ಯಲಹಂಕ | ಕೇಂದ್ರ ಕಛೇರಿ | ಒಟ್ಟು ಮೊತ್ತ |
|---|---|---|---|---|---|---|---|---|---|
| ಏಪ್ರಿಲ್09 ಮಾರ್ಚ್ 10 | 2787134 | 1143026 | 4561792 | - | - | - | | - | 8491952 |
| ಏಪ್ರಿಲ್10 ಮಾರ್ಚ್ 11 | 2829542 | 1848563 | 4788735 | - | - | 2330 | | - | 9469170 |
| ಏಪ್ರಿಲ್11 ಮಾರ್ಚ್ 12 | 3224278 | 1065671 | 10318204 | - | - | 3890 | | - | 14612043 |
| ಏಪ್ರಿಲ್12 ಮಾರ್ಚ್ 23 | 4473224 | 1048659 | 4852074 | 600 | | 6562747 | | 62400 | 16937304 |
| ಏಪ್ರಿಲ್13 ಆಗಸ್ಟ್ 13 | 4563188 | 2821080 | 5182710 | - | 138600 | 3271066 | 643642 | - | 16620286 |
| ಒಟ್ಟು | **17877366** | **7926999** | **29703515** | **600** | **138600** | **9840033** | **643642** | **62400** | **66130755** |

ಮುಂದುವರೆದಂತೆ 2009ರಲ್ಲಿ ಅಂಗಡಿ ಮುಂಗಟ್ಟುಗಳ ಜಾಹೀರಾತು ಶುಲ್ಕ ವಸೂಲಾತಿ ಕಾರ್ಯಗಳ ವಿಕೇಂದ್ರಿಕರಣಗೊಳಿಸಿ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳಿಗೆ ವಹಿಸಲಾಗಿದ್ದು, ಈ ಕಾರ್ಯಕ್ಕಾಗಿ ಎಸ್.ಎ.ಎಸ್. ಮಾದರಿಯಲ್ಲಿ ಮುದ್ರಿಸಲ್ಪಟ್ಟ ಜಾಹೀರಾತು ಶುಲ್ಕ ಪಾವತಿ ಅರ್ಜಿಗಳನ್ನು ತಲಾ ಸುಮಾರು 1,000 ಅರ್ಜಿಗಳಂತೆ ವಿತರಿಸಲಾಗಿದ್ದು, ಅವುಗಳ ಕುರಿತು ಮಾಹಿತಿಯನ್ನು ಈ ತಹಲ್‌ವರೆವಿಗೂ ಕ್ರೂಢೀಕರಿಸಲಾಗಿರುವುದಿಲ್ಲ ಹಾಗೂ ಯಾವುದೇ ಸಹಾಯಕ ಕಂದಾಯ ಅಧಿಕಾರಿ ವಲಯದಲ್ಲಿ ಸದರಿ ಶುಲ್ಕವನ್ನು ವಸೂಲಾತಿ ಮಾಡಿರುವುದು ಕಂಡು ಬಂದಿರುವುದಿಲ್ಲ.

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಕಂದಾಯ ಅಧಿಕಾರಿ ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ತಮಗೆ ಕಂದಾಯ ಇಲಾಖೆಯ ಕಂದಾಯ ವಸೂಲಾತಿ ಚುನಾವಣಾ ಕಾರ್ಯ ಮುಂತಾದ ಕೆಲಸ ಕಾರ್ಯಗಳ ಬಹಳ ಅಧಿಕವಾಗಿದ್ದು ಈಗಾಗಲೇ ಕಂದಾಯ ಇಲಾಖೆಯ ಕೆಲಸ ಕಾರ್ಯಗಳಿಗೆ ಸಿಬ್ಬಂದಿ ಕೊರತೆಯಿದ್ದು, ಕೊರತೆಯಿರುವ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಕೋರಿ, ಎಲ್ಲಾ ಸಿಬ್ಬಂದಿಗೂ ಅಂಗಡಿ ಜಾಹೀರಾತು ಶುಲ್ಕ ತರಬೇತಿಯ ಕೊರತೆಯ ಕುರಿತು ಸಹ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ.

ಮೇಲ್ಕಂಡ ವರದಿಯ ಮೇರೆಗೆ, ಅಂಗಡಿ ಮುಂಗಟ್ಟುಗಳ ಅಂಗಡಿ ಮುಂಗಟ್ಟು ಶುಲ್ಕ ವಸೂಲಾತಿ ಕ್ಯಾಂಪ್‌ಗಳನ್ನು ನಡೆಸಬೇಕಾದ್ದಲ್ಲಿ ಕಂದಾಯ ಇಲಾಖೆಗೆ ಅವರು ಕೋರಿರುವಂತೆ ಹಲವಾರು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿರುತ್ತದೆ. ಅಲ್ಲದೇ ಸಭೆಯಲ್ಲಿ ಕಂದಾಯ ಇಲಾಖಾ ಅಧಿಕಾರಿ ಉದಾಹಿಸಿರುವಂತೆ ಶುಲ್ಕ ಪಾವತಿದಾರರು ಸರಿಯಾದ ಮಾಹಿತಿ ಒದಗಿಸದೇ ಕಡಿಮೆ ಶುಲ್ಕ ಪಾವತಿಸಿದ್ದಲ್ಲಿ, ಇದನ್ನು ಪುನಃ ಪರಿಶೀಲಿಸಿ ನ್ಯೂನತೆಗಳನ್ನು, ವ್ಯತ್ಯಾಸದ ಮೊತ್ತವನ್ನು ಪಾವತಿಸಿಕೊಳ್ಳಲು ದುಪ್ಪಟ್ಟು ಕಾರ್ಯಾಚರಣೆ ನಡೆಸಬೇಕಾಗುತ್ತದೆ.

ಮುಂದುವರೆದಂತೆ, ಡಾ॥ ಪಿ.ದಯಾನಂದ ಪೈ, ಮ್ಯಾನೇಜಿಂಗ್ ಡೈರೆಕ್ಟರ್ ಸೆಂಚುರಿರವರು ಅಂಗಡಿ ಮುಂಗಟ್ಟುಗಳ ಜಾಹೀರಾತು ಶುಲ್ಕ ಪಾವತಿ ಗುತ್ತಿಗೆಯನ್ನು ತಮ್ಮ ಸಂಸ್ಥೆಗೆ ವಹಿಸಿಕೊಡುವಂತೆ ಕೋರಿ ಸದರಿ ಗುತ್ತಿಗೆಗೆ ತಾವು ವಾರ್ಷಿಕ ರೂ.3,50,00,000/-(ರೂ.ಮೂರು ಕೋಟಿ ಐವತ್ತು ಲಕ್ಷಗಳು ಮಾತ್ರ)ಗಳನ್ನು ಪಾವತಿಸಲು ಸಿದ್ದರಿದ್ದು, ಸದರಿ ಗುತ್ತಿಗೆಯನ್ನು 10 ವರ್ಷಗಳ ಅವಧಿಗೆ ನೀಡಿದಲ್ಲಿ ಪ್ರಾಥಮಿಕ ವರ್ಷದ ಗುತ್ತಿಗೆ ಮೊತ್ತಕ್ಕೆ ಪ್ರತೀ ವರ್ಷ ಶೇ 5% ರಷ್ಟು ಹೆಚ್ಚುವರಿ ಶುಲ್ಕವನ್ನು ಪಾವತಿಸಲು ಸಿದ್ದರಿದ್ದೇವೆಂದು ದಿನಾಂಕ:15.10.2013 ರಂದು ಪತ್ರ ಮುಖೇನ ತಿಳಿಸಿರುತ್ತಾರೆ.

ಜಾಹೀರಾತು ಶುಲ್ಕ ವಸೂಲಾತಿ ಕಾರ್ಯವನ್ನು ಈಗಾಗಲೇ ಹುಬ್ಬಳ್ಳಿ, ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಅಳವಡಿಸಿಕೊಳ್ಳಾಗಿದೆ.

ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ಇರಿಸಿ ಪಾಲಿಕೆಯ ಆರ್ಥಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲಾ ಅಂಗಡಿ ಮುಂಗಟ್ಟುಗಳ ಜಾಹೀರಾತು ಶುಲ್ಕ ವಸೂಲಾತಿಯನ್ನು ಪಾರದರ್ಶಕ ಕಾಯ್ದೆಯನ್ವಯ ಇ-ಟೆಂಡರ್ ಮೂಲಕ ಹೊರಗುತ್ತಿಗೆ ನೀಡುವ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19-11-2013 ರ ಟಿಪ್ಪಣಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 8 ವಲಯಗಳಲ್ಲಿನ ಪ್ರದೇಶಗಳಲ್ಲಿರುವ ಅಂಗಡಿ ಮುಂಗಟ್ಟುಗಳ ಮೇಲೆ ಪ್ರದರ್ಶಿಸಲ್ಪಡುತ್ತಿರುವ ಜಾಹೀರಾತು ಫಲಕಗಳ ಜಾಹೀರಾತು ಶುಲ್ಕ ವಸೂಲಾತಿಯಿಂದ ಪಾಲಿಕೆಯ ಬೊಕ್ಕಸದ ಆದಾಯಕ್ಕೆ ಹೇರಳ ಅವಕಾಶವಿದ್ದಾಗ್ಯೂ ಸಹ ಸಿಬ್ಬಂದಿ ವರ್ಗದ ಕೊರತೆ ಮುಂತಾದ ಸಮಸ್ಯೆಗಳಿಂದ ಅಂಗಡಿ ಮುಂಗಟ್ಟುಗಳ ಜಾಹೀರಾತು ಶುಲ್ಕ ವಸೂಲಾತಿಯು ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದು ಏಪ್ರಿಲ್-2009-2010ನೇ ಸಾಲಿನಿಂದ ಆಗಸ್ಟ್-2013ನೇ ಸಾಲಿನ ಅವಧಿಯವರೆವಿಗೆ ಸರಾಸರಿ ಕೇವಲ ವಾರ್ಷಿಕ ರೂ.1-00ಕೋಟಿ ಆದಾಯ ಬರುತ್ತಿರುವುದನ್ನು ಗಣನೆಗೆ ತೆಗೆದುಕೊಂಡು ಪಾಲಿಕೆ ಸಂಪನ್ಮೂಲನ ಕ್ರೋಢೀಕರಣ ನಿಟ್ಟಿನಲ್ಲಿ ಅಂಗಡಿ ಮುಂಗಟ್ಟುಗಳ ಜಾಹೀರಾತು ಶುಲ್ಕ ವಸೂಲಾತಿ ಕಾರ್ಯವನ್ನು ಪಾರದರ್ಶಕ ಕಾಯ್ದೆಯನ್ವಯ 8 ವಲಯಗಳಿಗೆ 8 ವಿವಿಧ ಪ್ಯಾಕೇಜ್‌ಗಳ ಹೊರಗುತ್ತಿಗೆಯನ್ನು ಟೆಂಡರ್ ಕಂ ಹರಾಜು ಪ್ರಕ್ರಿಯೆ ಮೂಲಕ ನೀಡುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 28 (153)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 23-09-2013 ರಂದು ತೆರಿಗೆ ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷರು 'ಸಂಪನ್ಮೂಲ ಕ್ರೋಢೀಕರಣ' ಹಾಗೂ ಪಾಲಿಕೆಯ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿನ ಅನಧಿಕೃತ ಜಾಹೀರಾತು ಫಲಕಗಳನ್ನು ಸಕ್ರಮಗೊಳಿಸುವಂತೆ ಸೂಚಿಸಿರುವ ಹಿನ್ನಲೆಯಲ್ಲಿ, ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಲಾಗಿದೆ.

ಈ ಹಿಂದೆ ಅಸ್ತಿತ್ವದಲ್ಲಿದ್ದ ಬೆಂಗಳೂರು ನಗರ ಸಭೆ ಪಿ.ಸಿ.ಡಿ. ಬೈಲಾಗಳನ್ನು ನಗರ ಸಭೆಯ ಆಡಳಿತಗಾರರ ದಿನಾಂಕ:24-03-1995ರ ನಡವಳಿಗಳನ್ನು ಮೈಸೂರು ರಾಜ್ಯ ಸಂಸ್ಥಾನವು ದಿನಾಂಕ : 13.04.1954ರ ಆದೇಶದಲ್ಲಿ ಅನುಮೋದಿಸಿರುವ ಮೇರೆಗೆ ಜಾರಿಗೆ ತರಲಾಗಿದೆ.

ಸದರಿ ಬೈಲಾಗಳನ್ನು ಸುಮಾರು 60 ವರ್ಷಗಳಷ್ಟು ಹಳೆಯದಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತುತ ಪರಿಸ್ಥಿತಿಗೆ ಅನುಗುಣವಾಗಿಲ್ಲವಾಗಿರುವುದನ್ನು ಮನಗಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸಕ್ತ ಬೌಗೋಳ ವ್ಯಾಪ್ತಿ, ಪರಿಸರ ಹಾಗೂ ಜಾಹೀರಾತು ಉದ್ದಿಮೆ ಹಾಗೂ ಜಾಹೀರಾತು ಇಲಾಖೆಯ ಸ್ಥಿತಿಗತಿಗಳನ್ನು ಪರಿಗಣಿಸಿ, ಇವುಗಳಿಗೆ ಅನುಗುಣವಾಗಿ ಈ ಹಿಂದೆ ಅಸ್ಥಿತ್ವದಲ್ಲಿದ್ದ ಜಾಹೀರಾತು ಬೈಲಾ (Public Coverage Department) ಗೆ ಬದಲಾಗಿ ನೂತನ ಜಾಹೀರಾತು ಬೈಲಾ-2006ನ್ನು ಕರ್ನಾಟಕ ಸರ್ಕಾರದ ಆದೇಶದ ಸಂಖ್ಯೆ:UDD/374/MNU/2003, ದಿನಾಂಕ:25-09-2006 ರಂದು ಅನುಮೋದಿಸಿದ್ದು, ಪಾಲಿಕೆಯ ನೂತನ ಜಾಹೀರಾತು ಬೈಲಾ-2006ನ್ನು ಕೆ.ಎಂ.ಸಿ. ಕಾಯ್ದೆ 1976ರ ಕಲಂ 923(24)ರ ಮೇರೆಗೆ ದಿನಾಂಕ:29-09-2006 ರಂದು ಪ್ರಕಟಿಸಿ ಅಳವಡಿಸಿಕೊಳ್ಳಲಾಗಿದೆ.

ಮಾನ್ಯ ಕರ್ನಾಟಕ ಸರ್ಕಾರದ ದಿನಾಂಕ:16-01-2007ರ ಆದೇಶದ ಸಂಖ್ಯೆ:ನಅಇ 92 ಎಂಎನ್‌ವೈ 2006ರ ಅನುಸಾರ ಈ ಹಿಂದೆ ಅಸ್ತಿತ್ವದಲ್ಲಿದ್ದ ಪಾಲಿಕೆಯ ಬೌಗೋಳಿಕ ಹಾಗೂ ಆಡಳಿತ್ಮಾತಕ ವ್ಯಾಪ್ತಿಯ ಹೊರವಲಯದಲ್ಲಿದ್ದ 07-ನಗರ ಸಭೆ, 01-ಪುರಸಭೆ ಹಾಗೂ 110 ವಿಲೇಜ್ ಪಂಚಾಯತ್‌ನ ಪ್ರದೇಶಗಳನ್ನು ಸೇರ್ಪಡೆ ಮಾಡಿ ದಿನಾಂಕ:16-01-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಅಸ್ತಿತ್ವಕ್ಕೆ ತರಲಾಗಿದ್ದು, ನೂತನ ಜಾಹೀರಾತು ಬೈಲಾ-2006ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಪ್ರದೇಶಗಳಿಗೂ ಏಕರೀತಿಯಾಗಿ ಅಳವಡಿಸಿಕೊಳ್ಳಲಾಗಿದೆ.

ದಿನಾಂಕ: 01-06-2007 ರಂದು ವಿಶೇಷ ಆಯುಕ್ತರವರ ಆದೇಶದ ಮೇರೆಗೆ ಪಾಲಿಕೆಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ ಹೊಸದಾಗಿ ವಾಣಿಜ್ಯ ಜಾಹಿರಾತು ಫಲಕಗಳ ಅನುಮತಿಯನ್ನು ಸ್ಥಗಿತಗೊಳಿಸಲಾಗಿದ್ದು, ಪುನಃ ದಿನಾಂಕ: 26-07-2008ರ ವಿಶೇಷ ಆಯುಕ್ತರು(ಆಡಳಿತ) ರವರ ಆದೇಶದ ಮೇರೆಗೆ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಹೊಸದಾಗಿ ವಾಣಿಜ್ಯ ಫಲಕಗಳ ಅನುಮತಿಯನ್ನು ಸ್ಥಗಿತಗೊಳಿಸಲಾಗಿದ್ದು ಹಾಗೂ ಕೇವಲ ಸ್ವಯಂ ಜಾಹೀರಾತು ಫಲಕಗಳಿಗೆ ಮಾತ್ರ ಅನುಮತಿ ನೀಡಲಾಗುತ್ತಿದೆ.

ಮುಂದುವರೆದಂತೆ, ನೂತನ ಜಾಹೀರಾತು ಬೈಲಾ-2006ಗೆ ಕೆಲವು ತಿದ್ದುಪಡಿಗಳು ಹಾಗೂ ಸೇರ್ಪಡೆಗಳ ಕರಡು ಪ್ರತಿಯನ್ನು ಸರ್ಕಾರದ ದಿನಾಂಕ:09-07-2013ರ ಆದೇಶ ಸಂಖ್ಯೆ: ನಇ/362/ಎಂಎನ್‌ಯು/2010 ರಲ್ಲಿ ಅನುಮೋದಿಸಿದ್ದು, ತಿದ್ದುಪಡಿ ಕರಡು ಪ್ರತಿಯನ್ನು ಕರ್ನಾಟಕ ರಾಜ್ಯ ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಕೋರಿ ಮಾನ್ಯ ಆಯುಕ್ತರು ದಿನಾಂಕ:13.09.2013 ರಂದು ಪತ್ರ ಬರೆದಿರುತ್ತಾರೆ.

ಮೇಲ್ಕಂಡ ಯಾವುದೇ ಜಾಹೀರಾತು ಬೈಲಾ / ತಿದ್ದುಪಡಿಗಳಲ್ಲಿ ಅನಧಿಕೃತ ಜಾಹೀರಾತು ಫಲಕಗಳನ್ನು ಸಕ್ರಮಗೊಳಿಸುವ ಕುರಿತು ನಿಯಮಾವಳಿಗಳನ್ನು ರೂಪಿಸಲಾಗಿರುವುದಿಲ್ಲ.

ಸದರಿ ವಿಷಯದ ಕುರಿತು ಪಾಲಿಕೆ ವ್ಯಾಪ್ತಿಯಲ್ಲಿನ 525 ಅನಧಿಕೃತ ಜಾಹೀರಾತು ಫಲಕಗಳನ್ನು ಸಕ್ರಮಗೊಳಿಸುವ ದಿನಾಂಕ:29-09-2012ರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:259/12-13ರ ತೀರ್ಮಾನವನ್ನು ಘನ ಸರ್ಕಾರದ ದಿನಾಂಕ:21-09-2013ರ ಸಂಖ್ಯೆ: ನಅಇ 231 ಎಂಎನ್‌ಯು 2013, ರಲ್ಲಿ ರದ್ದು ಪಡಿಸಲಾಗಿದೆ.

ದಿನಾಂಕ:30.08.2013 ರಂದು ನಡೆದ ಪಾಲಿಕೆ ಸಭೆಯಲ್ಲಿಯೂ ಸಹ ಅನಧಿಕೃತ ಜಾಹೀರಾತು ಫಲಕಗಳನ್ನು ಕುರಿತು ಸುದೀರ್ಘವಾಗಿ ಚರ್ಚಿಸಲಾಗಿದ್ದು, ದಿನಾಂಕ:12.09.2013 ರಂದು ಪೂಜ್ಯ ಮಹಾಪೌರರು ಸೂಚಿಸಿರುವ ಮೇರೆಗೆ ಸದರಿ ಅನಧಿಕೃತ ಫಲಕಗಳನ್ನು ತೆರವುಗೊಳಿಸಲು ಪಾಲಿಕೆಯ ಬೊಕ್ಕಸಕ್ಕೆ ಅಪಾರ ವೆಚ್ಚ ಉಂಟಾಗುವುದು ಎಂದು ಸೂಚಿಸಿರುವ ಮೇರೆಗೆ, ಹಾಲಿ ಅಸ್ಥಿತ್ವದಲ್ಲಿರುವ ಅನಧಿಕೃತ ಜಾಹೀರಾತು ಫಲಕಗಳನ್ನು ವಲಯದ ಜಾಹೀರಾತು ಸಿಬ್ಬಂದಿ ವತಿಯಿಂದ ಕರಾರುವಕ್ಕಾಗಿ ಗುರುತಿಸಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ನಿರ್ಣಯಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರದಿಂದ ಅನುಮೋದಿಸಿಕೊಳ್ಳಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ಇರಿಸಿ ಹಾಲಿ ನಡೆಸಲಾಗುತ್ತಿರುವ ತೆರವುಗೊಳಿಸುವ ಕಾರ್ಯಚರಣೆಯನ್ನು ಸ್ಥಗಿತಗೊಳಿಸಿ ಅನಧಿಕೃತ ಜಾಹೀರಾತು ಫಲಕಗಳನ್ನು ಸಂಪೂರ್ಣ ವಿವರಗಳೊಂದಿಗೆ ಕರಾರುವಕ್ಕಾಗಿ ಗುರುತಿಸಿ ಆಯುಕ್ತರವರಿಗೆ ವರದಿ ಸಲ್ಲಿಸುವಂತೆ ಸೂಚಿಸಲು ಸಂಬಂಧಪಟ್ಟ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಜಾಹೀರಾತು ಸಿಬ್ಬಂದಿಗೆ ಆದೇಶಿಸುವಂತೆ ಮಾನ್ಯ ಆಯುಕ್ತರಲ್ಲಿ ಕೋರಬಹುದಾಗಿದೆ.

ಮುಂದುವರೆದಂತೆ, ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಕುರಿತು, ಸಂಬಂಧಪಟ್ಟ ಜಾಹೀರಾತುದಾರರಿಗೆ ಅಧಿಕೃತ ಹಾಗೂ ಅನಧಿಕೃತ ಜಾಹೀರಾತು ಫಲಕಗಳ / ಜಾಹೀರಾತುದಾರರ ವಿರುದ್ಧ ಪ್ರಸ್ತುತದಲ್ಲಿ ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎನ್ನುವ ಭರವಸೆಯೊಂದಿಗೆ ಅನಧಿಕೃತ ಜಾಹೀರಾತು ಫಲಕದ ಭಾವಚಿತ್ರ ಹಾಗೂ ಸಂಪೂರ್ಣ ವಿವರಗಳನ್ನು ನಿಗಧಿತ ದಿನಾಂಕದೊಳಗೆ ಸಲ್ಲಿಸುವಂತೆ ಹಾಗೂ ನಿಗಧಿತ ದಿನಾಂಕದ ನಂತರ ಬರುವ ಮನವಿಗಳನ್ನು ಪರಿಗಣಿಸಲಾಗಿರುವುದಿಲ್ಲವೆಂದು ಪತ್ರಿಕಾ ಪ್ರಕಟಣೆ ನೀಡಬಹುದಾಗಿದೆ.

ಸಿಬ್ಬಂದಿ ವರ್ಗದ ತಪಾಸಣೆಯ ಬದಲಿಗೆ ಪತ್ರಿಕಾ ಪ್ರಕಟಣೆ ನೀಡವುದರಿಂದ ಸಿಬ್ಬಂದಿ ವರ್ಗವು ಸದರಿ ಕಾರ್ಯಚರಣೆಗೆ ತೆಗೆದುಕೊಳ್ಳಬಹುದಾದ ದೀರ್ಘಕಾಲವನ್ನು ಮೊಟಕುಗೊಳಿಸಿ ಮುಂದೆ ಹೊಸದಾಗಿ ಅನುಮತಿ ನೀಡಬೇಕಾಗಿರುವ ವಾಣಿಜ್ಯ ಜಾಹೀರಾತು ಫಲಕಗಳ ಸಂಖ್ಯೆ, ಅವುಗಳಿಂದ ಪಾಲಿಕೆಗೆ ಉಂಟಾಗಬಹುದಾದ ಜಾಹೀರಾತು ಶುಲ್ಕ ರೂಪದ ಹಾಗೂ ದಂಡ ರೂಪದ ಆದಾಯವನ್ನು ಮೊದಲೇ ನಿಗಧಿಪಡಿಸಿಕೊಳ್ಳಬಹುದಾಗಿದ್ದು ಹಾಗೂ ಹೊಸದಾಗಿ ಅನುಮತಿ ನೀಡುವ ಕುರಿತು ಜಾಹೀರಾತುದಾರರಲ್ಲಿ ಉಂಟಾಗಬಹುದಾದ ಗೊಂದಲ ಆತಂಕವನ್ನು ನಿವಾರಿಸಿ, ಅನವಶ್ಯಕವಾಗಿ ಒದಗಬಹುದಾದ ಕಾನೂನು ತೊಡಕುಗಳನ್ನು ತಡೆಗಟ್ಟಬಹುದಾಗಿರುತ್ತದೆ. ಅಲ್ಲದೇ ಹಾಲಿ ಬಾಕಿ ಹಾಗೂ ಪ್ರಸಕ್ತ ವರ್ಷದ ಜಾಹೀರಾತು ಶುಲ್ಕ ವಸೂಲಾತಿ ಕಾರ್ಯವು ಪ್ರಗತಿಯಲ್ಲಿದ್ದು, ಸಿಬ್ಬಂದಿಯ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಂಡು ನಿಗದಿತ ಅವಧಿಯೊಳಗಾಗಿ ಜಾಹೀರಾತು ಶುಲ್ಕ ವಸೂಲಾತಿ ಗುರಿಯನ್ನು ಸಾಧಿಸಿ, ಅಲ್ಪ ಕಾಲದಲ್ಲಿ ಪಾಲಿಕೆಯ ಖಜಾನೆಗೆ ಕೋಟ್ಯಾಂತರ ರೂಪಾಯಿಗಳ ಆದಾಯ ತಂದು, ಸಂಪನ್ಮೂಲ ಕ್ರೋಢೀಕರಣ ಗುರಿಯತ್ತ ನಿಶ್ಚಿತವಾಗಿ ಸಾಗಬಹುದಾಗಿದೆ.

ಈ ಸಂಬಂಧ ಕೆ.ಎಂ.ಸಿ.ಕಾಯ್ದೆ ಕಲಂ 138ರಲ್ಲಿ ಅನಧಿಕೃತ ಜಾಹೀರಾತುಗಳನ್ನು ತೆಗೆದುಹಾಕಲು ಮತ್ತು ಕಲಂ 134ರ ಅಡಿಯಲ್ಲಿ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ನಗರ ಪಾಲಿಕೆಯು ನಿಗಧಿಪಡಿಸಿರುವ ಜಾಹೀರಾತು ದರದಲ್ಲಿ ಅನಧಿಕೃತ ಪ್ರದರ್ಶನದ ಅವಧಿಗೆ ಪೂರಾ ಹಣವನ್ನು ದಂಡ ರೂಪದಲ್ಲಿ ಪಾವತಿ ಮಾಡಿ ಈಗಾಗಲೇ ನ್ಯಾಯಾಲಯಗಳ ಮುಂದೆ ಹೂಡಿರುವ ಎಲ್ಲಾ ಮೊಕದ್ದಮೆ/ರಿಟ್ ಅರ್ಜಿಗಳನ್ನು ಹಿಂಪಡೆದು ಅನುಮತಿ ನೀಡಿದ ನಂತರ ಪಾಲಿಕೆ ನಿಯಮಾವಳಿಗಳಿಗೆ ಅನುಗುಣವಾಗಿ ಫಲಕ ಅಳವಡಿಸುವ ಕುರಿತು ಹಾಗೂ ಇನ್ನೂ ಮುಂದೆ ಅನಧಿಕೃತ ಜಾಹೀರಾತುಗಳನ್ನು ಪಾಲಿಕೆ ಅನುಮತಿ ಇಲ್ಲದೇ ಅಳವಡಿಸುದಿಲ್ಲವೆಂಬ ಅಂಶಗಳನ್ನೊಳಗೊಂಡ ಮುಚ್ಚಳಿಕೆ ಪತ್ರವನ್ನು ಛಾಪಾ ಕಾಗದದ ಮೇಲೆ ಪಡೆಯಬಹುದಾಗಿರುತ್ತದೆ.

..............................3

ಅನಧಿಕೃತ ಜಾಹೀರಾತು ಫಲಕಗಳ ಪ್ರದರ್ಶನ ಅವಧಿಯ ಜಾಹೀರಾತು ಶುಲ್ಕ ವಸೂಲಾತಿ ಮಾಡಿ ನಿಗಧಿತ ಸಿಮಿತ ಅವಧಿಗೆ ಇವುಗಳಿಗೆ ಮಾತ್ರ ಹೊಸದಾಗಿ ಅನುಮತಿ ನೀಡುವ ಕುರಿತು ಸ್ಪಷ್ಟ ಅಭಿಪ್ರಾಯ ಮತ್ತು ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-11-2013 ರ ಟಿಪ್ಪಣಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಫಲಕಗಳಿಂದ ಪಾಲಿಕೆಯ ಬೊಕ್ಕಸಕ್ಕೆ ಯಾವುದೇ ರೀತಿಯ ಆದಾಯವಿಲ್ಲದೆ ನಷ್ಟವುಂಟಾಗುತ್ತಿರುವುದು ಹಾಗೂ ಅನಿಯಂತ್ರಿತ ಅನಧಿಕೃತ ಜಾಹೀರಾತು ಫಲಕಗಳ ಪ್ರದರ್ಶನದಿಂದ ಬೆಂಗಳೂರು ನಗರದ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಕಛೇರಿಯ ಸಹಾಯಕ ಆಯುಕ್ತರು (ಜಾಹೀರಾತು)ರವರ ಮೇಲುಸ್ತುವಾರಿಯಲ್ಲಿ ಎಲ್ಲಾ ವಲಯಗಳ ಅನಧಿಕೃತ ಜಾಹೀರಾತು ಫಲಕಗಳನ್ನು ಸಂಬಂಧಪಟ್ಟ ವಲಯ ಜಾಹೀರಾತು ಅಧಿಕಾರಿಗಳ ಸಹಯೋಗದಲ್ಲಿ ತೆರವುಗೊಳಿಸಲು ವಲಯವಾರು ಟೆಂಡರ್ ಕರೆದು ಹೊರಗುತ್ತಿಗೆಗೆ ನೀಡುವುದೆಂದು ಹಾಗೂ ಅಧಿಕೃತ ಜಾಹೀರಾತು ಫಲಕಗಳನ್ನು ಕೂಡ ವಲಯ ಮಟ್ಟದಲ್ಲಿ ಸ್ಥಳ ಪರಿಶೀಲನೆ ನಡೆಸಿ ನಗರ ಸೌಂದರ್ಯಕ್ಕೆ ಹಾಗೂ ಜಾಹೀರಾತು ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿ ಅಳವಡಿಸಿರುವುದು ಕಂಡು ಬಂದಲ್ಲಿ ಅಂತಹ ಫಲಕಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸುವಂತೆ ಕ್ರಮ ಕೈಗೊಳ್ಳುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪಾಲಿಕೆಗೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಅನಧಿಕೃತ ಜಾಹೀರಾತು ಫಲಕಗಳನ್ನು ತೆಗೆಯುವ ಷರತ್ತಿನೊಂದಿಗೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 29 (154)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ವ್ಯಾಪ್ತಿಯಲ್ಲಿ Revised Detailed Project Report (RDPR) ಅಡಿಯಲ್ಲಿ ಕೈಗೊಂಡಿರುವ ಬೃಹತ್ ನೀರುಗಾಲುವೆಯ ಕಾಮಗಾರಿಗಳ ಅಂದಾಜನ್ನು CSMC ಯು ದಿನಾಂಕ:15-03-2011 ರಂದು ನಡೆದ 95ನೇ ಸಭೆಯಲ್ಲಿ ಬೃಹತ್ ನೀರುಗಾಲುವೆಯ ಆರ್‌ಡಿಪಿಆರ್ ಗಾಗಿ ರೂ.925.38 ಕೋಟಿಗಳ ಮೊತ್ತಕ್ಕೆ ಅನುಮೋದನೆ ನೀಡಿದ್ದ ಮೇರೆಗೆ, ಪ್ರಸ್ತುತ ರೂ.347.38 ಕೋಟಿಗಳ ಗಾತ್ರದ ಕಾಮಗಾರಿಗಳಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.312.00 ಲಕ್ಷಗಳ ಅಂದಾಜಿಗೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆಸಿ ಪ್ರಸ್ತಾವನೆಗಳನ್ನು ಸಿದ್ಧಪಡಿಸಿಕೊಳ್ಳಲು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ. ಅದರಂತೆ, ಸದರಿ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಲಯ, ಬೃ.ಬೆ.ಮ.ಪಾ. ರವರು ಟೆಂಡರ್ ಅನ್ನು ಕರೆದಿರುತ್ತಾರೆ.

ಅದರಂತೆ, ಸದರಿ ಕಾಮಗಾರಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿ ಸಿಂಧುತ್ವ ಹೊಂದಿರುತ್ತಾರೆ. ಗುತ್ತಿಗೆದಾರರು ಸಲ್ಲಿಸಿದ್ದ ತಾಂತ್ರಿಕ ಬಿಡ್ ಅನ್ನು ದಿನಾಂಕ:13-05-2013 ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಇಬ್ಬರೂ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವ ಮೇರೆಗೆ, ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ: 25-05-2013 ರಂದು ತೆರೆಯಲಾಗಿದ್ದು, ಗುತ್ತಿಗೆದಾರರಾದ ಶ್ರೀ. ಜವಳಿ ಚಂದ್ರಣ್ಣ ಪ್ರಕಾಶ್ ರವರು ಕಡಿಮೆ ದರಗಳನ್ನು ನಮೂದಿಸಿ L1 ಆಗಿರುತ್ತಾರೆ.

**ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ.**

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2010-11ನೇ ಸಾಲಿನ ದರಪಟ್ಟಿಯಂತೆ) | ರೂ. 3,02,50,776.78 |
| 2 | ಬಿಡ್ಡುದಾರರಾದ ಶ್ರೀ. ಜವಳಿ ಚಂದ್ರಣ್ಣ ಪ್ರಕಾಶ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 3,37,32,041.90 |
| 3 | ಅಂದಾಜು ಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ | ಶೇ. 24.73% ಹೆಚ್ಚುವರಿ |
| 4 | 2012-13ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ | ಶೇಕಡ 2.39% ಹೆಚ್ಚುವರಿ |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಜವಳಿ ಚಂದ್ರಣ್ಣ ಪ್ರಕಾಶ್, ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.73%ರಷ್ಟು ಹೆಚ್ಚುವರಿ ಇದ್ದು, 2012-13ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 2.39% ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ. ಈ ಮೇರೆಗೆ, ಶ್ರೀ. ಜವಳಿ ಚಂದ್ರಣ್ಣ ಪ್ರಕಾಶ್, ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ.3,37,32,041.90 ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ **ದಿನಾಂಕ:02-08-2013**ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:22-11-2013 ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:22-11-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 22-11-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 30 (155)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ಗಳ ವಿಭಾಗ ರವರು 2013-14ನೇ ಸಾಲಿನಲ್ಲಿ ಹದಗೆಟ್ಟ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳನ್ನು ಅಭಿವೃದ್ಧಿ ಮತ್ತು ಡಾಂಬರೀಕರಣವನ್ನು ಕೈಗೆತ್ತಿಕೊಳ್ಳುವ ಕ್ರಿಯಾಯೋಜನೆಯು (Action Plan) ಪಾಲಿಕೆ ಸಭೆ ವಿಷಯ ಸಂಖ್ಯೆ:14(51)/2013-14 ದಿನಾಂಕ:28-09-2013 ರಂದು ಅನುಮೋದನೆಯಾಗಿರುತ್ತದೆ.

ಸದರಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ 14 ಕಾಮಗಾರಿಗಳ ಒಟ್ಟು ಮೊತ್ತ ರೂ.20.00 ಕೋಟಿಗಳಾಗಿದ್ದು, ವಿವರಗಳು ಕೆಳಕಂಡಂತೆ ಇರುತ್ತದೆ.

**ಪಟ್ಟಿ ಸಂಖ್ಯೆ:1**

| Sl. No. | Sl. No. as per Resolution | Description | Approximate Project Cost (Rs. in Crores) |
|---|---|---|---|
| 1 | 187 | Improvements to Kenchenahalli main road from Halagevaderahalli to BDA Layout (Stage-2 work) | 2.00 |
| 2 | 188 | Improvements and asphalting to Srinivasanagar main road | 1.00 |
| 3 | 189 | Improvements and asphalting to Subroto Mukherjee road (Aiyappa Swamy nagar) | 2.00 |
| 4 | 190 | Improvements and asphalting to inner ring road to Banyan tree (by side of ring road Gorguntepalya) | 1.00 |
| 5 | 191 | Improvements and asphalting to Hegganahalli main road | 1.00 |
| 6 | 192 | Improvements and asphalting to Aiyappaswamy temple road from Subroto Mukherjee road upto HMT circle road | 2.00 |
| 7 | 193 | Improvements and asphalting to Jalahalli main road | 2.00 |
| 8 | 194 | Improvements and asphalting to Bahubalinagar main road | 2.00 |
| 9 | 195 | Improvements and asphalting to Kempegowdanagar main road in Peenya | 1.00 |
| 10 | 196 | Improvements and asphalting to Sharadambanagar main road | 1.00 |
| 11 | 197 | Improvements and asphalting to Deepa Complex road from ORR opposite to Dr.B.R.Ambedkar groups of Institution | 1.00 |
| 12 | 198 | Improvements and asphalting to Javaregowdanagar main road | 1.00 |
| 13 | 199 | Improvements and asphaltinjg to Nagarbhavi 2nd Stage road | 1.00 |
| 14 | 200 | Improvements and asphalting to road from IIPM junction to SWD towards NGEF layout | 2.00 |
| | | **Total** | **20.00** |

ತದನಂತರ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ. ಮುನಿರತ್ನ ರವರು ಮೇಲೆ ತಿಳಿಸಿದ 14 ಕಾಮಗಾರಿಯ ಜೊತೆಗೆ ಇನ್ನಷ್ಟು ಕಾಮಗಾರಿಗಳ ಮಂಜೂರಾತಿಯನ್ನು ನೀಡಬೇಕೆಂದು ಕೋರಿದ್ದು, ಆದರೆ ಸದರಿ ಹೆಚ್ಚುವರಿ ಕಾಮಗಾರಿಗಳನ್ನು ಅನುದಾನ ಲಭ್ಯತೆಯ ಕೊರತೆಯಿಂದಾಗಿ ತೆಗೆದುಕೊಳ್ಳಲಾಗುವುದಿಲ್ಲವೆಂದು ತಿಳಿಸಿದ ಪ್ರಯುಕ್ತ ಅನುಮೋದಿಸಲ್ಪಟ್ಟ 14 ಕಾಮಗಾರಿಗಳಲ್ಲಿ ಕೆಳಕಂಡ 3 ಕಾಮಗಾರಿಗಳನ್ನು ಉಳಿಸಿಕೊಂಡು ಇತರೇ 11 ಕಾಮಗಾರಿಗಳ ಬದಲು ಬೇರೆ ರಸ್ತೆಗಳ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿದ್ದು, ಉಳಿಸಿಕೊಳ್ಳಲಾಗಿರುವ ಕಾಮಗಾರಿಗಳು ಕೆಳಕಂಡಂತೆ ಇರುತ್ತದೆ.

.........2

ಪಟ್ಟಿ ಸಂಖ್ಯೆ:2

| Sl. No. | Sl. No. as per Resolution | Description | Approximate Project Cost (Rs. in Crores) |
|---|---|---|---|
| 1 | 194 | Improvements and asphalting to Bahubalinagar main road | 2.00 |
| 2 | 196 | Improvements and asphalting to Sharadambanagar main road | 1.00 |
| 3 | 200 | Improvements and asphalting to road from IIPM junction to SWD towards NGEF layout | 2.00 |
| | | **Total** | **5.00** |

ಉಳಿಕೆ 11 ಕಾಮಗಾರಿಗಳ ಬದಲಾಗಿ ಇತರೆ 6 ಮುಖ್ಯ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಕೋರಿರುವ ಪಟ್ಟಿ ಕೆಳಕಂಡಂತಿದ್ದು ಹಾಗೂ ದಿನಾಂಕ:16-11-2013 ರಂದು ಮಾನ್ಯ ಶಾಸಕರು ಪತ್ರ ನೀಡಿರುತ್ತಾರೆ.

ಪಟ್ಟಿ ಸಂಖ್ಯೆ:3

| Sl. No. | Particulars | Cost in Lakhs |
|---|---|---|
| 1 | Construction of Road and Drain in Muthyala Nagar, J.P.Park Ward No.17 from 12th Main to 7th 'B' Main, Bandappa Garden and B.R.Shivashankar Main Road | 2.50 Lakhs |
| 2 | Construction of Road and Drain in Muthyala Nagar, J.P.Park Ward No.17 from 19th 'A' cross to 17th 'F' Main Road | 2.50 Lakhs |
| 3 | Construction of Road and Drain in Muthyala Nagar, J.P.Park Ward No.17 from 17th Cross and 16th Cross to 15th 'H' Cross | 2.50 Lakhs |
| 4 | Construction of Road and Drain in Muthyala Nagar J.P.Park Ward No.17 from Tankbund 1st Main Road to 2nd Main Road and other cross roads connecting to tankbund road | 2.50 Lakhs |
| 5 | Construction of Road and Drain in Sundar Nagar and Chennappa Garden in J.P.Park Ward No.17 from Vijayabankk 2nd Main Road to 4th Cross and 4th Main Road in Sundar Nagar and Chennappa Garden | 2.50 Lakhs |
| 6 | Constructionk of Road and Drain in Venkatamma MSR Colony, SBM Colony and Brundavan Nagar in JP Park Ward No.17 from 1st Cross and 1st Main 13th Main Road and 1st Cross to 7th Cross in MSR Colony and 4th Cross to 7th Cross in SBM Colony | 2.3 Lakhs |
| | **Total** | **14.80** |

ಮೇಲ್ಕಂಡ 6 ಕಾಮಗಾರಿಗಳನ್ನು (ಪಟ್ಟಿ ಸಂಖ್ಯೆ 3) ಅತಿ ಮುಖ್ಯ (Top priority) ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂಬ ಕೋರಿಕೆಯ ಮೇರೆಗೆ ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ-ರಸ್ತೆ ಮೂಲಭೂತ ಸೌಕರ್ಯ) ರವರು ಪ್ರಸ್ತಾವನೆಯನ್ನು ತಯಾರಿಸಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಸಲ್ಲಿಸಿರುತ್ತಾರೆ. ಈ ಮೇರೆಗೆ ಈಗಾಗಲೇ ಅನುಮೋದನೆಗೊಂಡಿರುವ 14 ಕಾಮಗಾರಿಗಳಲ್ಲಿ ಪಟ್ಟಿ ಸಂಖ್ಯೆ (2) ರಲ್ಲಿನ 3 ಕಾಮಗಾರಿಗಳನ್ನು ಉಳಿಸಿಕೊಂಡು ಉಳಿಕೆ 11 ಕಾಮಗಾರಿಗಳ ಬದಲಾಗಿ ಇತರೆ 6 (ಪುಟ ಸಂಖ್ಯೆ:3) ಅತಿ ಮುಖ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಬದಲಾವಣೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-11-2013ರ ಟಿಪ್ಪಣಿ.

............................3

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:29-11-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:29-11-2013ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (156)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸ್ಯಾಂಕಿ ಕೆರೆ ಏರಿ ರಸ್ತೆಯ (ಸರಪಳಿ 1.80 ಕಿ.ಮೀ. ರಿಂದ 2.60 ಕಿ.ಮೀ.ವರೆಗೆ) ಅಗಲೀಕರಣ ಹಾಗೂ ಅಭಿವೃದ್ಧಿಗೊಳಿಸುವ ಕಾಮಗಾರಿಗೆ ಎರಡು (2) ಪ್ರತ್ಯೇಕ ಅಂದಾಜು ಪಟ್ಟಿಗಳನ್ನು ತಯಾರಿಸಿ, ಅನುಮೋದನೆ ಪಡೆದು 'ಟೆಂಡರ್ ಆಹ್ವಾನಿಸಿ, ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿತ್ತು. ಸದರಿ ಕೆಲಸವನ್ನು ಪ್ರಾರಂಭಿಸಲು ಮುಂದಾದಾಗ ಸಾರ್ವಜನಿಕರು ಘನ ಉಚ್ಛ ನ್ಯಾಯಾಲಯದಲ್ಲಿ ಮರ ಕಡಿಯುವ ವಿಚಾರದಲ್ಲಿ Writ petition ದಾಖಲಿಸಿದ್ದರು. ಈ ವ್ಯಾಜ್ಯವು ಕರ್ನಾಟಕ ಘನ ಉಚ್ಛ ನ್ಯಾಯಾಲಯದಲ್ಲಿ ಇತ್ಯರ್ಥಗೊಂಡಿದ್ದು, ರಸ್ತೆ ಅಗಲೀಕರಣವನ್ನು 12 ತಿಂಗಳಲ್ಲಿ ಕಾಮಗಾರಿಯನ್ನು ಮಾಡಲು ದಿನಾಂಕ:30-11-2011 ರಂದು ಆದೇಶ ನೀಡಿರುತ್ತಾರೆ.

ಈ ಮೇರೆಗೆ ಕೆಲಸವನ್ನು ಪ್ರಾರಂಭ ಮಾಡುವ ಮುನ್ನ ಸದರಿ ಸ್ಥಳದ ಮಣ್ಣಿನ ಪರೀಕ್ಷೆಯನ್ನು ಮಾಡಿದಾಗ ಹಿಂದೆ ಅನುಮೋದನೆಗೊಂಡಿದ್ದ RCC Retaining Wall ಅನ್ನು ನಿರ್ಮಾಣ ಮಾಡುವುದು ಕಷ್ಟಕರವಾಗಿದ್ದುದ್ದೆಂದು ತಿಳಿದು ಬಂದ ಹಿನ್ನಲೆಯಲ್ಲಿ, ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿ ಮುಂದೆ ದಿನಾಂಕ:28-04-2012 ರಂದು ನಡೆದ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಲಾಯಿತು. ತಾಂತ್ರಿಕ ಸಲಹಾ ಸಮಿತಿಯು ಕೆಲವು ಸಲಹೆ ಸೂಚನೆಗಳನ್ನು ನೀಡಿದ್ದು, ಈ ಸೂಚನೆಯಂತೆ ಆರ್ಥಿಕ ಮಿತವ್ಯಯವುಳ್ಳ Gerogrid ಮತ್ತು Concrete segmental block ಗಳನ್ನು ಅಳವಡಿಸಿಕೊಂಡು ರಸ್ತೆ ಏರಿಯ ಅಗಲೀಕರಣದ ಪರಿಷ್ಕೃತ ವಿನ್ಯಾಸವನ್ನು ದಿನಾಂಕ:16-10-2012 ರಂದು ನಡೆದ ತಾಂತ್ರಿಕ ಸಲಹಾ ಸಮಿತಿಯ ಮುಂದೆ ಮಂಡಿಸಿ ಅನುಮೋದನೆಯನ್ನು ಪಡೆಯಲಾಯಿತು. ಈ ಬದಲಾವಣೆ ಪರಿಷ್ಕೃತ ವಿನ್ಯಾಸದಂತೆ ಕಾಮಗಾರಿಯನ್ನು ಮೂಲ ಗುತ್ತಿಗೆದಾರರಿಂದ ಪ್ರಾರಂಭಿಸಲು ಕೋರಲಾಯಿತು. ಆದರೆ ಸದರಿ ಕಾಮಗಾರಿಗೆ ಮೂಲ ವಿನ್ಯಾಸದ ಬದಲು ಬೇರೆ ರೀತಿಯ ವಿನ್ಯಾಸವನ್ನು ಅಳವಡಿಸಿರುವುದರಿಂದ ಮತ್ತು ಅನುಷ್ಠಾನದಲ್ಲಿ ಬಹಳ ವಿಳಂಬವಾಗಿರುವ ಪ್ರಯುಕ್ತ ಹಿಂದಿನ ಕಾಮಗಾರಿಗಳ ಟೆಂಡರ್‌ಅನ್ನು ರದ್ದುಗೊಳಿಸಿ ಸದರಿ ಪರಿಷ್ಕೃತ ಕಾಮಗಾರಿಗೆ ಹೊಸದಾಗಿ ಒಂದೇ ಅಂದಾಜು ಪಟ್ಟಿಯನ್ನು 2013-14ನೇ ಸಾಲಿನ ದರಗಳ ಪಟ್ಟಿಯ ಆಧಾರದ ಮೇಲೆ ರೂ.18.00 ಕೋಟಿ ಮೊತ್ತಕ್ಕೆ ತಯಾರಿಸಲಾಗಿರುತ್ತದೆ.

2013-14ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-1733 ರಡಿಯಲ್ಲಿ ಮುಂದುವರೆದ ಕಾಮಗಾರಿಯಡಿಯಲ್ಲಿ ಅನುದಾನವನ್ನು ಕಲ್ಪಿಸಲಾಗಿದ್ದು, ಸದರಿ ಕಾಮಗಾರಿಯ ವೆಚ್ಚವನ್ನು ಈ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಭರಿಸಬಹುದಾಗಿದೆ.

ಘನ ಉಚ್ಛ ನ್ಯಾಯಾಲಯದ ಆದೇಶವು ಉಲ್ಲಂಘನೆಯಾಗುವ ಸಂಭವವಿರುವುದರಿಂದ ಹಾಗೂ ಕಾಮಗಾರಿಯ ವಿಳಂಬವನ್ನು ತಪ್ಪಿಸುವ ಸಲುವಾಗಿ ಸ್ಥಾಯಿ ಸಮಿತಿ ಸಭೆ ಮತ್ತು ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಸದರಿ ಯೋಜನೆಗೆ, ಈಗಾಗಲೇ ಟೆಂಡರ್ ಆಹ್ವಾನಿಸಲು ಆಯುಕ್ತರವರ ಅನುಮೋದನೆ ಪಡೆದು ದಿನಾಂಕ:24-10-2013 ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಈ ಮೇರೆಗೆ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.18.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 25-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-12-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 12-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 32 (157)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:13-09-2013 ರಂದು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:97ರ ವ್ಯಾಪ್ತಿಯಲ್ಲಿ ಬರುವ ದಯಾನಂದನಗರದಲ್ಲಿ Construction of Multipurpose Office complex ಕಾಮಗಾರಿಯ ಬಗ್ಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ), ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ) ರವರುಗಳೊಡನೆ ಚರ್ಚಿಸಲಾಗಿ, ಮಾನ್ಯ ಆಯುಕ್ತರು ಕೆಲವು ಕೊಠಡಿಗಳನ್ನು ಕೈಬಿಟ್ಟು, ಕಾಮಗಾರಿಯನ್ನು ನಿರ್ವಹಿಸಲು ಮೌಖಿಕವಾಗಿ ಆದೇಶಿಸಿರುತ್ತಾರೆ. ಅದರಂತೆ ಸೂಚಿಸಿದ ಅಂಶಗಳನ್ನು ಕೈಬಿಟ್ಟು ಅಂದಾಜು ಪಟ್ಟಿ ಮತ್ತು ಬಿಡ್‌ದಾರರು ನಮೂದಿಸಿದ ದರಗಳಿಗೆ ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿ ವಿವರಗಳು ಈ ಕೆಳಕಂಡಂತಿವೆ :

- ಮೂಲ ಅಂದಾಜು ವೆಚ್ಚವು ರೂ.4,11,00,000-00 ಗಳು
- ಮಾನ್ಯ ಆಯುಕ್ತರ ಆದೇಶದಂತೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತವು ರೂ.5,53,90,000-00 ಗಳು
- Electrical Works: ರೂ.55,69,967-00 ಗಳಾಗಿರುತ್ತದೆ.

ಮುಂದುವರೆದು

- ಟೆಂಡರಿಗಿಟ್ಟ ಐಟಂಗಳ ಮೊತ್ತವು ರೂ.2,64,92,058-28 ಗಳು
- ಗುತ್ತಿಗೆದಾರರು ನಮೂದಿಸಿದ ಮೊತ್ತವು ರೂ.3,58,35,982-00 ಗಳು, ಅಲ್ಲದೆ ಹೆಚ್ಚುವರಿಯಾಗಿ
- Non-S.R. Items : ರೂ.4,14,961-14 ಗಳು
- Partition Works : ರೂ.7,24,945-87 ಗಳು
- Truss Roofing Work : ರೂ.22,20,000-00 ಗಳು

**ಒಟ್ಟು ರೂ.3,91,95,889-01 ಗಳಾಗಿರುತ್ತದೆ.**

ತುಲನಾತ್ಮಕ ವಿವರ :

| Sl. No. | Name of Agency | Tender Cost in Rs.as per 2011-12 SR | Quoted rates in Rs. | Tender premium% compared with the SR 2011-12 | Tender premium% compared with the SR 2013-14 | Status |
|---|---|---|---|---|---|---|
| 1 | K.Damodar | 26492058.28 | 35835982.00 | 35.27% above | 14.94% above | L1 |

ಆದ್ದರಿಂದ ಟೆಂಡರಿನಲ್ಲಿ ಭಾಗವಹಿಸಿ ಅರ್ಹಗೊಂಡ ಶ್ರೀ. ಕೆ.ದಾಮೋದರ್ ರವರು ನಮೂದಿಸಿರುವ ದರಗಳಿಗೆ ಒಟ್ಟು ಮೊತ್ತವು ರೂ.3,58,35,982-00 ಗಳನ್ನು ಎಸ್.ಆರ್.2011-12ರ ದರಗಳಿಗೆ ಹೋಲಿಸಿದಾಗ ಶೇ.35.27 ರಷ್ಟು ಹೆಚ್ಚಾಗಿದ್ದು ಹಾಗೂ ಎಸ್.ಆರ್. 2013-14ರ ದರಗಳಿಗೆ ಹೋಲಿಸಿದಾಗ ಶೇ.14.94 ರಷ್ಟು ಹೆಚ್ಚಾಗಿದ್ದು, (ಟೆಂಡರ್‌ಗಿಟ್ಟ ಮೊತ್ತವು Non Schedule of Rates ಗಳನ್ನು ಹೊರತುಪಡಿಸಲಾಗಿರುತ್ತದೆ ಹಾಗೂ ಈ ಅಂಶಗಳನ್ನು ಯಾವುದೇ ಹೆಚ್ಚು ಮೊತ್ತಕ್ಕೆ ನೀಡದೆ, ಅನುಮೋದಿತ ದರಗಳಿಗೆ ಮಾತ್ರ ಬಿಲ್ ಪಾವತಿಸಲಾಗುವುದು), ಸದರಿ ಕಾಮಗಾರಿಗೆ ಪ್ರಸ್ತುತವಾಗಿ ಕರೆದಿರುವ ಟೆಂಡರ್ 6ನೇ ಕರೆಯಾಗಿರುತ್ತದೆ.

ಮುಂದುವರೆದು, ಗುತ್ತಿಗೆದಾರರು ನಮೂದಿಸಿರುವ ಮೊತ್ತವು ರೂ. 3,58,35,982-00, Non-S.R. Items : ರೂ. 4,14,961-14 ಗಳು, Partition Works : ರೂ.7,24,945-87 ಗಳು ಮತ್ತು Truss Roofing Work :

..........................2

ರೂ.22,20,000-00 ಗಳಾಗಿದ್ದು, ಒಟ್ಟು ಮೊತ್ತ ರೂ.3,91,95,889.01 ಗಳಾಗಿರುತ್ತವೆ. Non-S.R. Items, Partition Works ಮತ್ತು Truss Roofing Work ಗಳನ್ನು ಸದರಿ ಗುತ್ತಿಗೆದಾರರಿಂದಲೇ ನಿರ್ವಹಿಸಲು ಹಾಗೂ ಶ್ರೀ.ಕೆ.ದಾಮೋದರ್ ರವರಿಗೆ ಒಟ್ಟು ಮೊತ್ತವಾದ ರೂ.3,91,95,889.00 ಗಳಿಗೆ ಕಾಮಗಾರಿ ನಿರ್ವಹಿಸುವ ಬಗ್ಗೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:23-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:28-11-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:28-11-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:28-11-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 33 (158)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ಸುಮಾರು 850.00 ಕಿ.ಮೀ. ಉದ್ದದ ರಾಜಕಾಲುವೆ ಇದ್ದು, ಬೆಂಗಳೂರು ನಗರವು ವೇಗವಾಗಿ ಬೆಳೆಯುತ್ತಿರುವುದರ ಪರಿಣಾಮವಾಗಿ, ರಾಜಕಾಲುವೆಗಳ ಸ್ಥಿತಿ ತುಂಬಾ ಹದಗೆಟ್ಟಿರುತ್ತದೆ. ಹಾಲಿ ಇರುವ ರಾಜಕಾಲುವೆಗಳು ಸಮರ್ಪಕವಾದ ವಿನ್ಯಾಸಗಳಿಗೆ ಅನುಗುಣವಾಗಿಲ್ಲದೆ ಇರುವುದರಿಂದ ಹಾಗೂ ರಾಜಕಾಲುವೆಗಳಿಗೆ ಕೈಗಾರಿಕಾ ಕೇಂದ್ರಗಳಿಂದ ನೇರವಾಗಿ ತ್ಯಾಜ್ಯವನ್ನು ಬಿಡುತ್ತಿರುವುದರಿಂದಲೂ, ಒಳಚರಂಡಿ ನೀರು ರಾಜಕಾಲುವೆಯಲ್ಲಿಯೇ ಹರಿಯುವುದರಿಂದಲೂ ಮತ್ತು ರಾಜಕಾಲುವೆಗಳಲ್ಲಿ ಗಿಡಗಂಟೆಗಳು ಬೆಳೆದುಕೊಂಡು ಸಮರ್ಪಕವಗಿ ನೀರು ಹರಿಯುವಿಕೆಗೆ ಅಡಚಣೆಯುಂಟಾಗಿ ರಾಜಕಾಲುವೆಗಳ ದುಃಸ್ಥಿತಿಗೆ ಕಾರಣವಾಗಿರುತ್ತವೆ. ಸಾರ್ವಜನಿಕರು ನೀರು ಕಾಲುವೆಗಳನ್ನು ಮತ್ತು ಕೆರೆ ಬದಿಗಳನ್ನು ಒತ್ತುವರಿ ಮಾಡಿರುವುದರಿಂದ ಕೆರೆಗಳ ಆಂತರಿಕ ಜಲಮಟ್ಟ ಸಹ ಕುಸಿದಿರುತ್ತದೆ.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜಕಾಲುವೆಗಳನ್ನು JNNURM ಯೋಜನೆಯಡಿ ಅಭಿವೃದ್ಧಿಪಡಿಸುವ ಯೋಜನೆಯನ್ನು ರೂಪಿಸಲು ಸರ್ಕಾರಿ ಆದೇಶ ಸಂಖ್ಯೆ: UDD 51 CSS 2006, Bangalore, Dated:05-08-2006 ರಲ್ಲಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ. ಅದರಂತೆ, ತಾಂತ್ರಿಕ ಪರಿಣಿತರೊಂದಿಗೆ ಕೂಲಂಕುಷವಾಗಿ ಚರ್ಚಿಸಿ ಯೋಜನೆಯನ್ನು ತಯಾರಿಸಲಾಗಿರುತ್ತದೆ. ಈ ಯೋಜನೆಯಲ್ಲಿ ರಾಜಕಾಲುವೆಗಳನ್ನು ವಿನ್ಯಾಸಕ್ಕೆ ತಕ್ಕಂತೆ ನಿರ್ಮಾಣ ಮಾಡುವುದು, ನೀರು ಕಾಲುವೆಗಳಲ್ಲಿ ಕೇವಲ ಮಳೆ ನೀರು ಮಾತ್ರ ಹರಿಸುವುದು, ರಾಜಕಾಲುವೆಗಳ ಇಕ್ಕೆಲುಗಳಲ್ಲಿ ಪ್ರತ್ಯೇಕ ಒಳಚರಂಡಿ ವ್ಯವಸ್ಥೆ, ಕೆರೆಗಳಲ್ಲಿ ನೀರು ಶೇಖರಿಸುವುದರೊಂದಿಗೆ ಆಂತರಿಕ ಜಲಮಟ್ಟವನ್ನು ಹೆಚ್ಚಿಸುವುದು, ಮಳೆಗಾಲದಲ್ಲಿ ಕೆರೆಗಳಲ್ಲಿ ಹೆಚ್ಚಿನ ನೀರು ಸಂಗ್ರಹವಾದ ಸಂದರ್ಭದಲ್ಲಿ ಸಮರ್ಪಕವಾಗಿ ನೀರಿನ ಸಮತೋಲನವನ್ನು ಕಾಯ್ದುಕೊಳ್ಳಲು Controlled Gate System ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಈ ಯೋಜನೆಯನ್ನು ಮಾಸ್ಟರ್ ಪ್ಲಾನ್‌ನಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ಕೇಂದ್ರ ನಗರಾಭಿವೃದ್ಧಿ ಇಲಾಖೆಯ JNNURM ನಿಯಮಾವಳಿ ಅನುಸಾರ ಯೋಜನೆಯನ್ನು ತಯಾರಿಸಲಾಗಿರುತ್ತದೆ. ದಿನಾಂಕ: 16-04-2012 ರಂದು ಜರುಗಿದ 62ನೇ ಪಾಲಿಕೆಯ ತಾಂತ್ರಿಕ ಸಲಾಹ ಸಮಿತಿ (TAC) ಮುಂದೆ ಮಂಡಿಸಲಾಗಿ ಯೋಜನೆಯ ಸಾಧಕಭಾದಕಗಳನ್ನು ಸುದೀರ್ಘ ಹಾಗೂ ಸಮಗ್ರವಾಗಿ ಚರ್ಚಿಸಿದ ನಂತರ ಸಮಿತಿಯು ಯೋಜನೆಯನ್ನು ಕೈಗೆತ್ತಿಕೊಳ್ಳಲು ಒಪ್ಪಿಗೆ ನೀಡಿರುತ್ತದೆ.

| ಕ್ರ ಸಂ. | ಯೋಜನೆಗಳ ವಿವರ | ಅನುಮೋದಿತ ಮೊತ್ತ ರೂ. ಕೋಟಿಗಳಲ್ಲಿ |
|---|---|---|
| 1 | Sewerage diversion and flood mitigation to improve environmental conditions near Water bodies at Yelahanka Zone-II in BBMP area | 470.88 |
| 2 | Sewerage diversion and flood mitigation to improve environmental conditions near Water bodies at Bommanahalli Zone-I in BBMP area | 349.93 |
| 3 | Sewerage diversion and flood mitigation to improve environmental conditions near Water bodies at Bommanahalli Zone-II in BBMP area | 357.88 |
| 4 | Sewerage diversion and flood mitigation to improve environmental conditions near Water bodies at Rajarajeshwari Nagar phase-I in BBMP area | 459.50 |
| 5 | Sewerage diversion and flood mitigation to improve environmental conditions near Water bodies at Rajarajeshwari Nagar phase-II in BBMP area | 316.21 |
| 6 | Sewerage diversion and flood mitigation to improve environmental conditions near Water bodies at Mahadevapura phase-II in BBMP area | 450.00 |
| 7 | Sewerage diversion and flood mitigation to improve environmental conditions near Water bodies at Mahadevapura phase-III in BBMP area | 450.00 |
| | **Total** | **2854.44** |

ಈ ಯೋಜನೆಯಡಿಯಲ್ಲಿ ಇತ್ತೀಚೆಗೆ ಪಾಲಿಕೆ ಸೇರ್ಪಡೆಯಾದ ಹೊರ ವಲಯಗಳಾದ ಯಲಹಂಕ, ರಾಜರಾಜೇಶ್ವರಿ ನಗರ, ಮಹದೇವಪುರ ಮತ್ತು ಬೊಮ್ಮನಹಳ್ಳಿ ಗಳು ಸೇರ್ಪಡೆಯಾಗಿರುತ್ತವೆ. ಈ ನಾಲ್ಕು ವಲಯಗಳ ಯೋಜನಾ ವೆಚ್ಚ ರೂ.2854.44 ಕೋಟಿಗಳಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರ ಶೇಕಡ 35, ರಾಜ್ಯ ಸರ್ಕಾರ ಶೇಕಡ 15 ಮತ್ತು ಪಾಲಿಕೆ ಶೇಕಡ 50 ರಷ್ಟು ಹಣ ಭರಿಸುವ ಒಡಂಬಡಿಕೆಗೆ ಒಳಪಟ್ಟಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಜೆ.ಎನ್.ಎನ್.ಯು.ಆರ್.ಎಮ್. ಅಡಿಯಲ್ಲಿ ಸಲ್ಲಿಸಲಾದ ಬೃಹತ್ ನೀರುಗಾಲುವೆ ಯೋಜನೆಗಳ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-12-2013ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:20-12-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:20-12-2013ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 35 (85)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:162ರ ವ್ಯಾಪ್ತಿಯಲ್ಲಿರುವ ಬನಶಂಕರಿ 3ನೇ ಹಂತ, 2ನೇ ಘಟ್ಟ, 7ನೇ ಬ್ಲಾಕ್, 1ನೇ ಬಿ ಮುಖ್ಯರಸ್ತೆಯಲ್ಲಿರುವ ಉದ್ಯಾನವನಕ್ಕೆ "ಪ್ರೊ॥ ಡಿ.ಲಿಂಗಯ್ಯ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ: 16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:469/2012-13 ರಲ್ಲಿ "ಪ್ರೊ॥ ಡಿ.ಲಿಂಗಯ್ಯ ಉದ್ಯಾನವನ" ಎಂದು ನಾಮಕರಣ ಮಾಡುವುದೆಂದು ಏಕಪಕ್ಷೀಯವಾಗಿ ತೀರ್ಮಾನಿಸಲಾಗಿದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-06-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:162ರ ವ್ಯಾಪ್ತಿಯಲ್ಲಿರುವ ಬನಶಂಕರಿ 3ನೇ ಹಂತ, 2ನೇ ಘಟ್ಟ, 7ನೇ ಬ್ಲಾಕ್, 1ನೇ ಬಿ ಮುಖ್ಯರಸ್ತೆಯಲ್ಲಿರುವ ಉದ್ಯಾನವನಕ್ಕೆ "ಪ್ರೊ॥ ಡಿ.ಲಿಂಗಯ್ಯ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-10-2013ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂ.162ರ ವ್ಯಾಪ್ತಿಯಲ್ಲಿರುವ ಬನಶಂಕರಿ 3ನೇ ಹಂತ, 2ನೇ ಘಟ್ಟ, 7ನೇ ಬ್ಲಾಕ್, 1ನೇ ಬಿ ಮುಖ್ಯರಸ್ತೆಯಲ್ಲಿರುವ ಉದ್ಯಾನವನಕ್ಕೆ "ಪ್ರೊ॥ಡಿ.ಲಿಂಗಯ್ಯ ಉದ್ಯಾನವನ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂ.162ರ ವ್ಯಾಪ್ತಿಯಲ್ಲಿರುವ ಬನಶಂಕರಿ 3ನೇ ಹಂತ, 2ನೇ ಘಟ್ಟ, 7ನೇ ಬ್ಲಾಕ್, 1ನೇ ಬಿ ಮುಖ್ಯರಸ್ತೆಯಲ್ಲಿರುವ ಉದ್ಯಾನವನಕ್ಕೆ "ಪ್ರೊ॥ಡಿ.ಲಿಂಗಯ್ಯ ಉದ್ಯಾನವನ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 36 (124)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹಿಂದ್ ಸಿಟಿಜನ್ ವೆಲ್‌ಫೇರ್ ಟ್ರಸ್ಟ್ (ರಿ) ರವರು ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರಿಗೆ ಮನವಿ ಪತ್ರ ಸಲ್ಲಿಸಿ, ವಾರ್ಡ್ ಸಂಖ್ಯೆ:119 ಮತ್ತು 140ರ ವ್ಯಾಪ್ತಿಯಲ್ಲಿ ಬರುವ ನವಾಬ್ ಹೆದರಾಲಿಖಾನ್ ಅಡ್ಡರಸ್ತೆ (ಕಲಾಸಿಪಾಳ್ಯ ಬಸ್ ನಿಲ್ದಾಣ) ದಿಂದ ಅಂದರೆ ಅಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜಪೇಟೆ 1ನೇ ಮುಖ್ಯರಸ್ತೆ ಮೂಲಕ ಹಾದು ಮುಸ್ಲಿಂ ಬರಿಯಲ್ ಗ್ರೌಂಡ್ ವರೆಗೆ ಅಂತ್ಯವಾಗುವ ರಸ್ತೆಗೆ (ಮೈಸೂರು ರಸ್ತೆ ಕೂಡುವವರೆಗೆ) ಟಿಪ್ಪು ಸುಲ್ತಾನ ಅರಮನೆ ರಸ್ತೆ ಎಂದು ನಾಮಕರಣ ಮಾಡಲು ಕೋರಿರುತ್ತಾರೆ. ಶ್ರೀ. ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ವಿಧಾನ ಸಭಾ ಸದಸ್ಯರು ಹಾಗೂ ಶ್ರೀ. ಡಾ॥ ಡಿ.ಹೇಮಚಂದ್ರ ಸಾಗರ್, ಮಾಜಿ ವಿಧಾನ ಸಭಾ ಸದಸ್ಯರುಗಳು ಹಾಗೂ ಪಾಲಿಕೆ ಸದಸ್ಯರುಗಳು ಮೇಲ್ಕಂಡ ರಸ್ತೆಗೆ ನಾಮಕರಣ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಶ್ರೀ. ಟಿಪ್ಪು ಸುಲ್ತಾನ್ ರವರು ಸ್ವಾತಂತ್ರ್ಯಕ್ಕಾಗಿ ತನ್ನ ಕುಟುಂಬವನ್ನೇ ತ್ಯಾಗ ಮಾಡಿ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿ ಕಾಡಿದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಾಗಿ ಅನೇಕ ಸಾರ್ವಜನಿಕ ಸೇವೆಯನ್ನು ಸಲ್ಲಿಸಿದ್ದು, ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 11 ಮಂದಿ ವಿರೋಧವಾಗಿ ಒಬ್ಬರು ಸಹಿ ಮಾಡಿರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:119 ಮತ್ತು 140ರ ವ್ಯಾಪ್ತಿಯಲ್ಲಿ ಬರುವ ನವಾಬ್ ಹೆದರಾಲಿಖಾನ್ ಅಡ್ಡರಸ್ತೆ (ಕಲಾಸಿಪಾಳ್ಯ ಬಸ್ ನಿಲ್ದಾಣ) ದಿಂದ ಅಂದರೆ ಅಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜಪೇಟೆ 1ನೇ ಮುಖ್ಯರಸ್ತೆ ಮೂಲಕ ಹಾದು ಮುಸ್ಲಿಂ ಬರಿಯಲ್ ಗ್ರೌಂಡ್ ವರೆಗೆ ಅಂತ್ಯವಾಗುವ ರಸ್ತೆಗೆ (ಮೈಸೂರು ರಸ್ತೆ ಕೂಡುವವರೆಗೆ) "ಶ್ರೀ ಟಿಪ್ಪು ಸುಲ್ತಾನ ಅರಮನೆ ರಸ್ತೆ" ಎಂದು ಪುನರ್ ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-10-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-10-2013ರ ನಿರ್ಣಯ.

...........................2

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 37 (159)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ ಕವಿತ ಬಾಬುರಾಜ್ ನಗರ ಪಾಲಿಕೆ ಸದಸ್ಯರು ರವರು ಡಾ॥ ಬಿ.ಆರ್.ಅಂಬೇಡ್ಕರ್ ಸೇವಾ ಸಂಘ ಮತ್ತು ಸ್ಥಳೀಯ ನಾಗರೀಕರು ಸಲ್ಲಿಸಲಾಗಿರುವ ಮನವಿ ಪತ್ರವನ್ನು ಲಗತ್ತಿಸುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲು ಯಿಂದ ಹರಳೂರುಗೆ ಹೋಗುವ ರಸ್ತೆ ಮತ್ತು ಕೆ.ಎಸ್.ಆರ್.ಪಿ ಯಿಂದ ಸೋಮಸುಂದ್ರಪಾಳ್ಯ ಸೇರುವ ವೃತ್ತಕ್ಕೆ ದಿವಂಗತ ಶ್ರೀ. ಪಿ.ನರಸಿಂಹರೆಡ್ಡಿ ರವರ ಹೆಸರನ್ನು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀ. ಪಿ.ನರಸಿಂಹರೆಡ್ಡಿ ಸಮಾಜ ಸೇವಕರು, ಕೂಡ್ಲು ಗ್ರಾಮದ ಪಟೇಲರು ಆಗಿದ್ದು, ಪ್ರಪ್ರಥಮ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಸಾರ್ವಜನಿಕ ಸೇವೆಯನ್ನು ಸಲ್ಲಿಸಿದ್ದು, ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 5 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೆ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲುಯಿಂದ ಹರಳೂರುಗೆ ಹೋಗುವ ರಸ್ತೆ ಮತ್ತು ಕೆ.ಎಸ್.ಆರ್.ಪಿ ಯಿಂದ ಸೋಮಸುಂದ್ರಪಾಳ್ಯ ಸೇರುವ ವೃತ್ತಕ್ಕೆ ದಿವಂಗತ ಶ್ರೀ. ಪಿ.ನರಸಿಂಹರೆಡ್ಡಿ ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2013ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂ.191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲುಯಿಂದ ಹರಳೂರುಗೆ ಹೋಗುವ ರಸ್ತೆ ಮತ್ತು ಕೆ.ಎಸ್.ಆರ್.ಪಿ. ಯಿಂದ ಸೋಮಸುಂದ್ರಪಾಳ್ಯ ಸೇರುವ ವೃತ್ತಕ್ಕೆ ದಿವಂಗತ ಶ್ರೀ."ಪಿ.ನರಸಿಂಹರೆಡ್ಡಿ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2013ರ ನಿರ್ಣಯವನ್ನು ಒಪ್ಪುವುದು".

.............................2

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂ.191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲುಯಿಂದ ಹರಳೂರುಗೆ ಹೋಗುವ ರಸ್ತೆ ಮತ್ತು ಕೆ.ಎಸ್.ಆರ್.ಪಿ. ಯಿಂದ ಸೋಮಸುಂದ್ರಪಾಳ್ಯ ಸೇರುವ ವೃತ್ತಕ್ಕೆ ದಿವಂಗತ ಶ್ರೀ."ಪಿ.ನರಸಿಂಹರೆಡ್ಡಿ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 38 (160)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ ಕವಿತ ಬಾಬುರಾಜ್ ನಗರ ಪಾಲಿಕೆ ಸದಸ್ಯರು ರವರು ಕೂಡ್ಲು ಗ್ರಾಮಸ್ಥರು ಸಲ್ಲಿಸಲಾಗಿರುವ ಸಲ್ಲಿಸಲಾಗಿರುವ ಮನವಿ ಪತ್ರವನ್ನು ಲಗತ್ತಿಸುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲು ವೃತ್ತಕ್ಕೆ ದಿವಂಗತ ಶ್ರೀ. ಮುನಿರೆಡ್ಡಿ ರವರ ಹೆಸರನ್ನು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀ. ಮುನಿರೆಡ್ಡಿ ರವರು ಕೂಡ್ಲು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಸಾರ್ವಜನಿಕ ಸೇವೆಯನ್ನು ಸಲ್ಲಿಸಿದ್ದು, ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 5 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೆ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲು ವೃತ್ತಕ್ಕೆ ದಿವಂಗತ ಶ್ರೀ. ಮುನಿರೆಡ್ಡಿ ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2013 ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂ.191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲು ವೃತ್ತಕ್ಕೆ ದಿವಂಗತ ಶ್ರೀ. ಮುನಿರೆಡ್ಡಿರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2013ರ ನಿರ್ಣಯವನ್ನು ಒಪ್ಪುವುದು".

.............................2

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

__ನಿರ್ಣಯ:__ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂ.191ರ ವ್ಯಾಪ್ತಿಯಲ್ಲಿ ಬರುವ ಕೂಡ್ಲು ವೃತ್ತಕ್ಕೆ ದಿವಂಗತ ಶ್ರೀ. ಮುನಿರೆಡ್ಡಿರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20–12–2013ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (161)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸಕಾರ್ಯಗಳ ಸುಸೂತ್ರ ನಿರ್ವಹಣೆಯ ಹಿತದೃಷ್ಟಿಯಿಂದ ಡಾಟ ಎಂಟ್ರಿ ಆಪರೇಟರ್‌ಗಳ (ದತ್ತಾಂಶ ನಮೂದಿಸುವ ನಿರ್ವಾಹಕರು) ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ, ದಿನಾಂಕ:18-03-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ: 1(245)/2010-11 ಪ್ರಕಾರ ಪಾಲಿಕೆಯ ಕೆಲಸಕಾರ್ಯಗಳ ನಿರ್ವಹಣೆಗೆ ಅಗತ್ಯವಿರುವ 388 ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಟೆಂಡರ್ ಕರೆದು ಪಡೆದುಕೊಳ್ಳಲು ನಿರ್ಣಯಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯ ಪ್ರಕಾರ ಸುಮಾರು 09 ಟೆಂಡರ್ ಪ್ಯಾಕೇಜ್‌ಗಳನ್ನು ಕರೆಯಬೇಕಾಗಿರುತ್ತದೆ (08 ವಲಯಗಳು ಹಾಗೂ 01 ಕೇಂದ್ರ ಕಛೇರಿ). ಆದರೆ ಪ್ರಸ್ತುತ ಸೇವೆಯನ್ನು ನೀಡುತ್ತಿರುವ ಕಿಯೋನಿಕ್ಸ್ ಸಂಸ್ಥೆಯ 4ಜಿ ವಿನಾಯಿತಿಯು ಹಠಾತ್ತಾಗಿ ಸರ್ಕಾರದಿಂದ ರದ್ದುಗೊಂಡಿರುವುದರಿಂದ ಹಾಗೂ 01-12-2013 ರ ನಂತರ ಹೊರಗುತ್ತಿಗೆ ಆಧಾರದ ಸೇವೆ ಮುಂದುವರೆಸುವುದಿಲ್ಲ ಎಂದು ಕೊಯೋನಿಕ್ಸ್ ಸಂಸ್ಥೆಯು ತಿಳಿಸಿರುವ ಹಿನ್ನಲೆಯಲ್ಲಿ ಮತ್ತು ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆದು ಏಕರೂಪದಲ್ಲಿ ಜಾರಿಗೆ ತರಲು ಸಮಯಾವಕಾಶದ ಅಭಾವವಿರುವುದರಿಂದ, ಈ ತುರ್ತು ಪರಿಸ್ಥಿತಿಯಲ್ಲಿ ಕೇಂದ್ರ ಕಛೇರಿಯ ವ್ಯಾಪ್ತಿಯಲ್ಲಿ ಒಂದೇ ಟೆಂಡರ್‌ಅನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಕರೆಯಲು ನಿರ್ಧರಿಸಿ ಅದರಂತೆ ದಿನಾಂಕ:15-06-2013 ರಂದು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿರುತ್ತದೆ.

ಸದರಿ ಡಾಟಾ ಎಂಟ್ರಿ ಆಪರೇಟರ್‌ಗಳ ವೇತನವನ್ನು ರಾಜ್ಯ ಸರ್ಕಾರದ ಕನಿಷ್ಠ ವೇತನದ ಮಾರ್ಗಸೂಚಿಯಂತೆ ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

| Sl. no | Name of the post | Basic pay + VDA | Employee's contribution | | Employer's share | | Total (3+6+7) |
|---|---|---|---|---|---|---|---|
| | | | PF 12% p.m | ESI 1.75% p.m | PF 13.61% p.m | ESI 4.75% p.m | |
| 1 | 2 | 3 | 4 | 5 | 6 | 7 | 8 |
| 1 | Data Entry Operator | 5881.20 +1357.20 = 7288.40 | 869 | 127 | 985 | 344 | 8567 |

ಮೇಲ್ಕಂಡ ವೇತನಕ್ಕೆ ಸೇವಾ ಶುಲ್ಕವನ್ನು ಟೆಂಡರ್‌ದಾರರು ಸೇರಿಸಿ ಒಟ್ಟು ವೆಚ್ಚವನ್ನು ನಮೂದಿಸಬೇಕಾಗಿರುತ್ತದೆ (ಸೇವಾ ತೆರಿಗೆ ಪ್ರತ್ಯೇಕ) ಡಾಟಾ ಎಂಟ್ರಿ ಆಪರೇಟರ್‌ಗಳ ವಲಯವಾರು ಅವಶ್ಯಕತೆ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂ | ವಲಯದ ಹೆಸರು | ನಿಯೋಜಿಸಿರುವ ಡಾಟಾ ಎಂಟ್ರಿ ಆಪರೇಟರ್‌ಗಳ ಸಂಖ್ಯೆ |
|---|---|---|
| 1. | ಕೇಂದ್ರ ಕಛೇರಿ | 96 |
| 2. | ಪೂರ್ವ ವಲಯ | 46 |
| 3. | ಪಶ್ಚಿಮ ವಲಯ | 56 |

.....................2

| | | |
|---|---|---|
| 4. | ದಕ್ಷಿಣ ವಲಯ | 65 |
| 5. | ರಾಜರಾಜೇಶ್ವರಿ ನಗರ | 29 |
| 6. | ಮಹದೇವಪುರ | 20 |
| 7. | ದಾಸರಹಳ್ಳಿ | 31 |
| 8. | ಬೊಮ್ಮನಹಳ್ಳಿ | 17 |
| 9. | ಯಲಹಂಕ | 28 |
| | ಒಟ್ಟು | 388 |

ಸದರಿ ಟೆಂಡರ್‌ನಲ್ಲಿ ಪಾಲಿಕೆಯ ಕೆಲಸ ಕಾರ್ಯಗಳ ಅವಶ್ಯಕತೆಯ ಅನುಸಾರವಾಗಿ ಶೇ. 25% ರಷ್ಟು ಡಾಟಾ ಎಂಟ್ರಿ ಆಪರೇಟರ್‌ಗಳ ಸಂಖ್ಯೆಯಲ್ಲಿ ಏರಿಳಿತ ಮಾಡುವ ನಿಯಮಾವಳಿಗಳನ್ನು ಅಳವಡಿಸಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಯಾವುದೇ ಬಿಡ್ಡದಾರರು ತಾಂತ್ರಿಕವಾಗಿ ಅರ್ಹರಾಗಿಲ್ಲವಾದುದ್ದರಿಂದ ಮತ್ತೊಮ್ಮೆ ಅಲ್ಪಾವಧಿ ಟೆಂಡರ್‌ಅನ್ನು ದಿನಾಂಕ:19-09-2013 ರಂದು ಕರೆಯಲಾಗಿದ್ದು, ಅದರಂತೆ ಮೂರು ಸಂಸ್ಥೆಗಳಿಂದ ಬಿಡ್‌ಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ ಎರಡು ಸಂಸ್ಥೆಗಳು ತಾಂತ್ರಿಕವಾಗಿ ಅರ್ಹರಾಗಿದ್ದು, ಅವುಗಳ ದರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ನಮೂದಿಸಿರುವ ಸೇವಾ ಶುಲ್ಕ | ಡಾಟಾ ಎಂಟ್ರಿ ಆಪರೇಟರ್ಸ್ ಸಂಖ್ಯೆ |
|---|---|---|---|
| 1. | M/s Strategic Outsourcing Services Pvt Ltd | 12% | 388 |
| 2. | M/s Crystal Infosystems and Services | 13.4% | 388 |

ಮೇಲ್ಕಂಡ ದರಗಳಂತೆ M/s Strategic Outsourcing Services Pvt Ltd ರವರು ಅತ್ಯಂತ ಕಡಿಮೆ ಸೇವಾ ಶುಲ್ಕವನ್ನು ನಮೂದಿಸಿರುವುದರಿಂದ ಸದರಿ ಸಂಸ್ಥೆಯನ್ನು ಮಾನ್ಯ ಆಯುಕ್ತರ ಅನುಮೋದನೆಯನ್ನು ಪಡೆದುಕೊಂಡು ದರ ಸಂಧಾನ ಸಮಿತಿಯ ಸಭೆಗೆ ದಿನಾಂಕ: 28-11-2013 ರಂದು ಕರೆದು ಚರ್ಚಿಸಿ ಅಂತಿಮ ದರವಾಗಿ ಶೇಕಡ: 11.5% ಸೇವಾ ಶುಲ್ಕವನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಸಂಸ್ಥೆಯವರು ಇದಕ್ಕೆ ತಮ್ಮ ಅನುಮತಿ ಮತ್ತು ಒಪ್ಪಿಗೆ ಪತ್ರವನ್ನು ಸಹ ನೀಡಿರುತ್ತಾರೆ. ಸದರಿ ಸೇವಾ ಶುಲ್ಕದ ಪ್ರಕಾರ 388 ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು 24 ತಿಂಗಳಿಗೆ (02 ವರ್ಷಕ್ಕೆ) ಪಡೆಯಲು ಒಟ್ಟು ವೆಚ್ಚ ರೂ.9,99,45,696/- (ರೂ.ಒಂಬತ್ತು ಕೋಟಿ ತ್ತೊಂಭತ್ತೊಂಭತ್ತು ಲಕ್ಷಗಳು ನಲವತ್ತೈದು ಸಾವಿರ ಆರುನೂರ ತೊಂಬತ್ತಾರು) ಗಳಾಗಿರುತ್ತವೆ. ಸದರಿ ವೆಚ್ಚದಲ್ಲಿ (ಸೇವಾ ತೆರಿಗೆಯಾದ 12.36% ಸಹ ಒಳಗೊಂಡಿರುತ್ತದೆ)

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸಕಾರ್ಯಗಳ ಸುಸೂತ್ರ ನಿರ್ವಹಣೆಯ ಹಿತದೃಷ್ಟಿಯಿಂದ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಪಡೆಯಲು ಅತ್ಯಂತ ತ್ವರಿತಗತಿಯಲ್ಲಿ ಕ್ರಮ ಜರುಗಿಸಬೇಕಾಗಿರುವುದರಿಂದ ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-12-2013ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:28-12-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:28-12-2013ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 162 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಹಾಲಿ ನೀಡುತ್ತಿರುವ ಸಂಭಾವನೆಯೊಂದಿಗೆ (ಗೌರವಧನ) ಜನವರಿ 2014 ರಿಂದ ಜಾರಿಗೆ ಬರುವಂತೆ ಪ್ರತಿ ತಿಂಗಳು ಒಂದೂವರೆ ಸಾವಿರ ರೂಪಾಯಿಗಳನ್ನು (1500 ರೂಪಾಯಿಗಳು) ಹೆಚ್ಚುವರಿಯಾಗಿ ನೀಡುವುದು.

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಹಾಲಿ ನೀಡುತ್ತಿರುವ ಸಂಭಾವನೆಯೊಂದಿಗೆ (ಗೌರವಧನ) ಜನವರಿ 2014 ರಿಂದ ಜಾರಿಗೆ ಬರುವಂತೆ ಪ್ರತಿ ತಿಂಗಳು ಒಂದೂವರೆ ಸಾವಿರ ರೂಪಾಯಿಗಳನ್ನು (1500 ರೂಪಾಯಿಗಳು) ಹೆಚ್ಚುವರಿಯಾಗಿ ನೀಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 163 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 154ರ ಬಸವನಗುಡಿ 1ನೇ ಮುಖ್ಯರಸ್ತೆಯ ಎನ್.ಆರ್.ಕಾಲೋನಿ ಅಂಗಡಿ ಬೀದಿ ಮಧ್ಯೆ ಇರುವ 130x60 ಅಡಿಗಳ ನಿವೇಶನವನ್ನು ಸಾರ್ವಜನಿಕರ ಸಾರಿಗೆ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ನಅಇ 104 ಎಂಎನ್‌ಜಿ 2013 ದಿನಾಂಕ:23-09-2013 ರಂತೆ ನೀಡಲಾದ ಅನುಮತಿ ಮತ್ತು ದಿನಾಂಕ:28-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ತೀರ್ಮಾನದಂತೆ ಮಾರ್ಪಾಡಿತ ಷರತ್ತುಗಳೊಂದಿಗೆ ಮಾಸಿಕ ರೂ.1000/- ಗುತ್ತಿಗೆ ಹಣ ನಿಗಧಿಪಡಿಸಲು ನಗರಾಭಿವೃದ್ಧಿ ಇಲಾಖೆಯನ್ನು ಕೋರಲಾಗಿದ್ದು, ಸರ್ಕಾರದ ಆದೇಶವನ್ನು ಕಾಯ್ದಿರಿಸಿ ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಿದ್ದು, ಈ ರೀತಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನಿವೇಶನವನ್ನು ನೀಡಲು ಕೆಲವು ಕಾನೂನಿನ ತೊಡಕುಗಳಿರುವುದರಿಂದ ದಿನಾಂಕ:28-09-2013ರ ನಿರ್ಣಯವನ್ನು ಭಾಗಶಃ ಮಾರ್ಪಡಿಸಿ ಸದರಿ ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನೀಡಲು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಮಾಡಲಾಗಿದೆ.

**ಪ್ರಸ್ತಾವನೆ:**

1) ಸರ್ಕಾರಿ ಸ್ವಾಮ್ಯದ ಇಲಾಖೆಗಳಿಗೆ ಜಮೀನು ವಿಲೇವಾರಿ ಮಾಡುವ ಬಗ್ಗೆ ಕೆ.ಎಂ.ಸಿ. ಕಾಯ್ದೆ 1976 ರನ್ವಯ ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ: 02-06-2003 ರಂತೆ ನಿವೇಶನದ ಮಾರುಕಟ್ಟೆ ದರದ ಶೇಕಡ 50 ರಂತೆ ದರ ನಿಗಧಿಗೊಳಿಸಿ ಜಮೀನು ವಿಲೇವಾರಿ ಮಾಡಬಹುದಾಗಿರುತ್ತದೆ.
2) ಅದರಂತೆ, ಪ್ರಸ್ತುತ ಈ ನಿವೇಶನದ ಮಾರುಕಟ್ಟೆ ದರವು ಚದರ ಅಡಿಯೊಂದಕ್ಕೆ ರೂ.4,500/- ಗಳಾಗಿದ್ದು, ಅದರಂತೆ ಒಟ್ಟು 7800 ಚದರ ಅಡಿಗಳ ನಿವೇಶನದ ಮಾರುಕಟ್ಟೆ ದರವು ರೂ.3,51,00,000/- ಗಳಾಗುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ:02-06-2003 ರಂತೆ ಈ ನಿವೇಶನದ ಮಾರುಕಟ್ಟೆ ದರದ ಶೇಕಡ 50 ರಂತೆ ನಿವೇಶನ ಮೌಲ್ಯವು ರೂ.1,75,50,000/- ಗಳಾಗುತ್ತದೆ.
3) ಪ್ರಸ್ತುತ ಮಾರುಕಟ್ಟೆ ದರದ ಶೇ.50 ದರದಂತೆ ರೂ.1,75,50,000/- ಗಳ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪಡೆದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನಿವೇಶನವನ್ನು ವಿಲೇವಾರಿ ಮಾಡುವುದು.
4) ಸದರಿ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ನೆಲಮಹಡಿ ಒಳಗೊಂಡು 1581 ಚದರ ಮೀಟರ್ ವಿಸ್ತೀರ್ಣದ 3 ಮಹಡಿಗಳ ಕಟ್ಟಡವನ್ನು ತನ್ನ ವೆಚ್ಚದಲ್ಲಿ ನಿರ್ಮಿಸುವುದು.
5) ಈ ನಿವೇಶನದಲ್ಲಿ ನಿರ್ಮಿಸಲಿರುವ 3 ಮಹಡಿಗಳ ಕಟ್ಟಡದಲ್ಲಿ ನೆಲ ಮಹಡಿಯನ್ನು ಬಸ್ ನಿಲ್ದಾಣಕ್ಕಾಗಿ ಮತ್ತು 1ನೇ ಮಹಡಿಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಮತ್ತು ಇತರೆ ವಿವಿಧ ಉದ್ದೇಶಕ್ಕೆ ಬಳಸಿಕೊಳ್ಳುವುದು.

.............................2

6) 2ನೇ ಮಹಡಿಯಲ್ಲಿನ 434 ಚದರ ಮೀಟರ್ ವಿಸ್ತೀರ್ಣದ ಕಟ್ಟಡವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವುದು.
7) ಅದರಂತೆ ಕಟ್ಟಡದ 1/3 ಭಾಗ ಮತ್ತು ನಿವೇಶನದ 1/3 ಭಾಗದ ಹಕ್ಕನ್ನು ಪಾಲಿಕೆಯು ಪಡೆಯುವುದು.
8) ಹೀಗಾಗಿ, ಈ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ನಿರ್ಮಿಸಲಿರುವ ಒಟ್ಟು 1581 ಚದರ ಮೀಟರ್ ವಿಸ್ತೀರ್ಣದ ಕಟ್ಟಡಕ್ಕೆ ತಗುಲಲಿರುವ ಅಂದಾಜು ಒಟ್ಟು ವೆಚ್ಚ ರೂ.2,97,70,230/- ಗಳಲ್ಲಿ 2ನೇ ಮಹಡಿಯಲ್ಲಿ ಪಾಲಿಕೆಗೆ ಹಸ್ತಾಂತರಿಸುವ 434 ಚದರ ಮೀಟರ್ ವಿಸ್ತೀರ್ಣದ ಕಟ್ಟಡ (1/3 ಭಾಗ) ನಿರ್ಮಾಣಕ್ಕೆ ತಗುಲಲಿರುವ ಅಂದಾಜು ವೆಚ್ಚ ರೂ.81,72,220/- ಮತ್ತು ನಿವೇಶನದ 1/3 ಭಾಗದ ಹಕ್ಕಿಗಾಗಿ ನಿವೇಶನ ಮೌಲ್ಯ ರೂ.57,91,500/- ಗಳು ಸೇರಿ ಒಟ್ಟು ರೂ.1,39,63,720/- ಗಳನ್ನು ನಿವೇಶನದ ವಿಲೇವಾರಿ ಮೌಲ್ಯ ರೂ.1,75,50,000/-ಕ್ಕೆ ಹೊಂದಾಣಿಕೆ ಮಾಡಿಕೊಂಡು ಬಾಕಿ ಮೊತ್ತ ರೂ.35,86,280/- ಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಪಡೆದು ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣ ಮತ್ತಿತರ ಉದ್ದೇಶಕ್ಕೆ ನೀಡುವುದು.
9) ಈ ನಿವೇಶನದ 1/3 ಭಾಗದ ಹಕ್ಕನ್ನು ಪಾಲಿಕೆಯು ಉಳಿಸಿಕೊಳ್ಳುವುದು ಮತ್ತು 2/3 ಭಾಗದ ಹಕ್ಕನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನೀಡುವುದು.

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 154ರ ಬಸವನಗುಡಿ 1ನೇ ಮುಖ್ಯರಸ್ತೆಯ ಎನ್.ಆರ್.ಕಾಲೋನಿ ಅಂಗಡಿ ಬೀದಿ ಮಧ್ಯೆ ಇರುವ 130x60 ಅಡಿಗಳ ನಿವೇಶನವನ್ನು ಸಾರ್ವಜನಿಕರ ಸಾರಿಗೆ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ನಅಇ 104 ಎಂಎನ್‌ಜಿ 2013 ದಿನಾಂಕ:23-09-2013 ರಂತೆ ನೀಡಲಾದ ಅನುಮತಿ ಮತ್ತು ದಿನಾಂಕ:28-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ತೀರ್ಮಾನದಂತೆ ಮಾರ್ಪಾಡಿತ ಷರತ್ತುಗಳೊಂದಿಗೆ ಮಾಸಿಕ ರೂ.1000/- ಗುತ್ತಿಗೆ ಹಣ ನಿಗಧಿಪಡಿಸಲು ನಗರಾಭಿವೃದ್ಧಿ ಇಲಾಖೆಯನ್ನು ಕೋರಲಾಗಿದ್ದು, ಸರ್ಕಾರದ ಆದೇಶವನ್ನು ಕಾಯ್ದಿರಿಸಿ ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಿದ್ದು, ಈ ರೀತಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನಿವೇಶನವನ್ನು ನೀಡಲು ಕೆಲವು ಕಾನೂನಿನ ತೊಡಕುಗಳಿರುವುದರಿಂದ ದಿನಾಂಕ:28-09-2013ರ ನಿರ್ಣಯವನ್ನು ಭಾಗಶಃ ಮಾರ್ಪಡಿಸಿ ಸದರಿ ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನೀಡಲು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಮಾಡಲಾಗಿದೆ.

.............................3

<u>ಪ್ರಸ್ತಾವನೆ:</u>

1) ಸರ್ಕಾರಿ ಸ್ವಾಮ್ಯದ ಇಲಾಖೆಗಳಿಗೆ ಜಮೀನು ವಿಲೇವಾರಿ ಮಾಡುವ ಬಗ್ಗೆ ಕೆ.ಎಂ.ಸಿ. ಕಾಯ್ದೆ 1976 ರನ್ವಯ ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ: 02-06-2003 ರಂತೆ ನಿವೇಶನದ ಮಾರುಕಟ್ಟೆ ದರದ ಶೇಕಡ 50 ರಂತೆ ದರ ನಿಗಧಿಗೊಳಿಸಿ ಜಮೀನು ವಿಲೇವಾರಿ ಮಾಡಬಹುದಾಗಿರುತ್ತದೆ.

2) ಅದರಂತೆ, ಪ್ರಸ್ತುತ ಈ ನಿವೇಶನದ ಮಾರುಕಟ್ಟೆ ದರವು ಚದರ ಅಡಿಯೊಂದಕ್ಕೆ ರೂ.4,500/- ಗಳಾಗಿದ್ದು, ಅದರಂತೆ ಒಟ್ಟು 7800 ಚದರ ಅಡಿಗಳ ನಿವೇಶನದ ಮಾರುಕಟ್ಟೆ ದರವು ರೂ.3,51,00,000/- ಗಳಾಗುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ:02-06-2003 ರಂತೆ ಈ ನಿವೇಶನದ ಮಾರುಕಟ್ಟೆ ದರದ ಶೇಕಡ 50 ರಂತೆ ನಿವೇಶನ ಮೌಲ್ಯವು ರೂ.1,75,50,000/- ಗಳಾಗುತ್ತದೆ.

3) ಪ್ರಸ್ತುತ ಮಾರುಕಟ್ಟೆ ದರದ ಶೇ.50 ದರದಂತೆ ರೂ.1,75,50,000/- ಗಳ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪಡೆದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನಿವೇಶನವನ್ನು ವಿಲೇವಾರಿ ಮಾಡುವುದು.

4) ಸದರಿ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ನೆಲಮಹಡಿ ಒಳಗೊಂಡು 1581 ಚದರ ಮೀಟರ್ ವಿಸ್ತೀರ್ಣದ 3 ಮಹಡಿಗಳ ಕಟ್ಟಡವನ್ನು ತನ್ನ ವೆಚ್ಚದಲ್ಲಿ ನಿರ್ಮಿಸುವುದು.

5) ಈ ನಿವೇಶನದಲ್ಲಿ ನಿರ್ಮಿಸಲಿರುವ 3 ಮಹಡಿಗಳ ಕಟ್ಟಡದಲ್ಲಿ ನೆಲ ಮಹಡಿಯನ್ನು ಬಸ್ ನಿಲ್ದಾಣಕ್ಕಾಗಿ ಮತ್ತು 1ನೇ ಮಹಡಿಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಮತ್ತು ಇತರೆ ವಿವಿಧ ಉದ್ದೇಶಕ್ಕೆ ಬಳಸಿಕೊಳ್ಳುವುದು.

6) 2ನೇ ಮಹಡಿಯಲ್ಲಿನ 434 ಚದರ ಮೀಟರ್ ವಿಸ್ತೀರ್ಣದ ಕಟ್ಟಡವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವುದು.

7) ಅದರಂತೆ ಕಟ್ಟಡದ 1/3 ಭಾಗ ಮತ್ತು ನಿವೇಶನದ 1/3 ಭಾಗದ ಹಕ್ಕನ್ನು ಪಾಲಿಕೆಯು ಪಡೆಯುವುದು.

8) ಹೀಗಾಗಿ, ಈ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ನಿರ್ಮಿಸಲಿರುವ ಒಟ್ಟು 1581 ಚದರ ಮೀಟರ್ ವಿಸ್ತೀರ್ಣದ ಕಟ್ಟಡಕ್ಕೆ ತಗುಲಲಿರುವ ಅಂದಾಜು ಒಟ್ಟು ವೆಚ್ಚ ರೂ.2,97,70,230/- ಗಳಲ್ಲಿ 2ನೇ ಮಹಡಿಯಲ್ಲಿ ಪಾಲಿಕೆಗೆ ಹಸ್ತಾಂತರಿಸುವ 434 ಚದರ

.....................4

ಮೀಟರ್ ವಿಸ್ತೀರ್ಣದ ಕಟ್ಟಡ (1/3 ಭಾಗ) ನಿರ್ಮಾಣಕ್ಕೆ ತಗುಲಲಿರುವ ಅಂದಾಜು ವೆಚ್ಚ ರೂ.81,72,220/- ಮತ್ತು ನಿವೇಶನದ 1/3 ಭಾಗದ ಹಕ್ಕಿಗಾಗಿ ನಿವೇಶನ ಮೌಲ್ಯ ರೂ.57,91,500/- ಗಳು ಸೇರಿ ಒಟ್ಟು ರೂ.1,39,63,720/- ಗಳನ್ನು ನಿವೇಶನದ ವಿಲೇವಾರಿ ಮೌಲ್ಯ ರೂ.1,75,50,000/-ಕ್ಕೆ ಹೊಂದಾಣಿಕೆ ಮಾಡಿಕೊಂಡು ಬಾಕಿ ಮೊತ್ತ ರೂ.35,86,280/- ಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಪಡೆದು ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣ ಮತ್ತಿತರ ಉದ್ದೇಶಕ್ಕೆ ನೀಡುವುದು.

9) ಈ ನಿವೇಶನದ 1/3 ಭಾಗದ ಹಕ್ಕನ್ನು ಪಾಲಿಕೆಯು ಉಳಿಸಿಕೊಳ್ಳುವುದು ಮತ್ತು 2/3 ಭಾಗದ ಹಕ್ಕನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನೀಡುವುದು.

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 164 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-156ರ ವ್ಯಾಪ್ತಿಗೆ ಬರುವ ಶ್ರೀನಗರ 4ನೇ ಮುಖ್ಯರಸ್ತೆಗೆ "ಜೈನ್ ದೇವಸ್ಥಾನ ರಸ್ತೆ" ಎಂದು ನಾಮಕರಣ ಮಾಡಲು ಆಯುಕ್ತರವರು ಅಗತ್ಯ ಕ್ರಮ ಕೈಗೊಳ್ಳುವುದು.

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-156ರ ವ್ಯಾಪ್ತಿಗೆ ಬರುವ ಶ್ರೀನಗರ 4ನೇ ಮುಖ್ಯರಸ್ತೆಗೆ "ಜೈನ್ ದೇವಸ್ಥಾನ ರಸ್ತೆ" ಎಂದು ನಾಮಕರಣ ಮಾಡಲು ಆಯುಕ್ತರವರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 165 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೆಲ್ತ್ ಲಿಂಕ್ ವರ್ಕ್ಸ್ ಆಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಹಾಲಿ ನೀಡುತ್ತಿರುವ ಸಂಭಾವನೆಯೊಂದಿಗೆ (ಗೌರವಧನ) ಜನವರಿ 2014 ರಿಂದ ಜಾರಿಗೆ ಬರುವಂತೆ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿಗಳನ್ನು (1000 ರೂಪಾಯಿಗಳು) ಹೆಚ್ಚುವರಿಯಾಗಿ ನೀಡುವುದು.

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೆಲ್ತ್ ಲಿಂಕ್ ವರ್ಕ್ಸ್ ಆಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಹಾಲಿ ನೀಡುತ್ತಿರುವ ಸಂಭಾವನೆಯೊಂದಿಗೆ (ಗೌರವಧನ) ಜನವರಿ 2014 ರಿಂದ ಜಾರಿಗೆ ಬರುವಂತೆ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿಗಳನ್ನು (1000 ರೂಪಾಯಿಗಳು) ಹೆಚ್ಚುವರಿಯಾಗಿ ನೀಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

**ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ**

**ವಿಷಯದ ಸಂಖ್ಯೆ : 166 / 2013-14**

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-68ರ ವ್ಯಾಪ್ತಿಗೆ ಬರುವ ಕಾರ್ಡ್ ರಸ್ತೆಯಿಂದ ಮಹಾಲಕ್ಷ್ಮಿ ಬಡಾವಣೆಯ ಈಜುಕೊಳದವರೆವಿಗಿನ ರಸ್ತೆಗೆ "ಹಾಸ್ಯ ಚಕ್ರವರ್ತಿ ನರಸಿಂಹರಾಜು ರಸ್ತೆ" ಎಂದು ನಾಮಕರಣ ಮಾಡಲು ಆಯುಕ್ತರವರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-68ರ ವ್ಯಾಪ್ತಿಗೆ ಬರುವ ಕಾರ್ಡ್ ರಸ್ತೆಯಿಂದ ಮಹಾಲಕ್ಷ್ಮಿ ಬಡಾವಣೆಯ ಈಜುಕೊಳದವರೆವಿಗಿನ ರಸ್ತೆಗೆ "ಹಾಸ್ಯ ಚಕ್ರವರ್ತಿ ನರಸಿಂಹರಾಜು ರಸ್ತೆ" ಎಂದು ನಾಮಕರಣ ಮಾಡಲು ಆಯುಕ್ತರವರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:30–12–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

### ವಿಷಯದ ಸಂಖ್ಯೆ : 167 / 2013–14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮೈಸೂರು ರಾಜ ಸಂಸ್ಥಾನದ ಯದುವಂಶದ ಕೊನೆಯ ಕುಡಿ ಶ್ರೀಕಂಠ ದತ್ತ ನರಸಿಂಹರಾಜ ಒಡೆಯರ್ ರವರು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಸದರಿಯವರು ಇನ್ನು ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಮೈಸೂರು ರಾಜ ಸಂಸ್ಥಾನದ ಯದುವಂಶದ ಕೊನೆಯ ಕುಡಿ ಶ್ರೀಕಂಠ ದತ್ತ ನರಸಿಂಹರಾಜ ಒಡೆಯರ್ ರವರು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಸದರಿಯವರು ಇನ್ನು ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಈ ಸಭೆಯು ಪ್ರಾರ್ಥಿಸುತ್ತದೆ".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 168 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ರಾಷ್ಟ್ರ ಕವಿಗಳಾದ ಡಾ||ಜಿ.ಎಸ್.ಶಿವರುದ್ರಪ್ಪರವರು (ಗಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ) ದಿನಾಂಕ: 23-12-2013 ರಂದು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಇವರು ನಮ್ಮ ನಾಡಿಗೆ ಹಾಗೂ ಕನ್ನಡ ಭಾಷೆಗೆ ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ರಾಷ್ಟ್ರ ಕವಿಗಳಾದ ಡಾ||ಜಿ.ಎಸ್.ಶಿವರುದ್ರಪ್ಪರವರು (ಗಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ) ದಿನಾಂಕ:23-12-2013 ರಂದು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಇವರು ನಮ್ಮ ನಾಡಿಗೆ ಹಾಗೂ ಕನ್ನಡ ಭಾಷೆಗೆ ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಸಭೆಯು ಪ್ರಾರ್ಥಿಸುತ್ತದೆ".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:30-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 169 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನೋಬೆಲ್ ಪ್ರಶಸ್ತಿ ಪುರಸ್ಕೃತ ದಕ್ಷಿಣ ಆಫ್ರಿಕಾ ಮಾಜಿ ಅಧ್ಯಕ್ಷರಾದ ನೆಲ್ಸನ್ ಮಂಡೇಲಾ ರವರು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಇವರು ಗಾಂಧಿವಾದಿಯಾಗಿದ್ದು, ಕರಿಯರಿಗೂ ಬಿಳಿಯರಂತೆ ಬದುಕುವ ಹಕ್ಕು ತಂದುಕೊಟ್ಟ ಈ ಮಹಾನ್ ಹೋರಾಟಗಾರನ ಸಭೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ".

ಶ್ರೀ. ಬಿ.ವಿ.ಗಣೇಶ್ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ನೋಬೆಲ್ ಪ್ರಶಸ್ತಿ ಪುರಸ್ಕೃತ ದಕ್ಷಿಣ ಆಫ್ರಿಕಾ ಮಾಜಿ ಅಧ್ಯಕ್ಷರಾದ ನೆಲ್ಸನ್ ಮಂಡೇಲಾ ರವರು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಇವರು ಗಾಂಧಿವಾದಿಯಾಗಿದ್ದು, ಕರಿಯರಿಗೂ ಬಿಳಿಯರಂತೆ ಬದುಕುವ ಹಕ್ಕು ತಂದುಕೊಟ್ಟ ಈ ಮಹಾನ್ ಹೋರಾಟಗಾರನ ಸಭೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಸಭೆಯು ಪ್ರಾರ್ಥಿಸುತ್ತದೆ".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:31-12-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 170 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿಭಾವಂತ ಕ್ರೀಡಾಪಟುಗಳಿದ್ದು, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಂಡು ನಾಡನ್ನು ಉತ್ತುಂಗಕ್ಕೆ ಕೊಂಡೊಯ್ಯುತ್ತಿದ್ದು, ಪ್ರತಿಭಾವಂತ ಕ್ರೀಡಾಪಟುಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ನಾಡಿನ ಕೀರ್ತಿಯನ್ನು ಬೆಳಗಲು ಉತ್ತೇಜನ ನೀಡುವ ಹಿನ್ನಲೆಯಲ್ಲಿ ಕ್ರೀಡಾಪಟುಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಹುಮ್ಮಸ್ಸನ್ನು ತುಂಬುವ ನಿಟ್ಟಿನಲ್ಲಿ ಪೂಜ್ಯ ಮಹಾಪೌರರು ಆಜ್ಞೆ ಮಾಡುವ ಕಾಮಗಾರಿಯ ಅನುದಾನದಡಿಯಲ್ಲಿ 25 ಲಕ್ಷ ರೂ.ಗಳನ್ನು ಸಹಾಯಧನವನ್ನಾಗಿ ನೀಡಲು ಅವಕಾಶ ಕಲ್ಪಿಸಲು ಅಗತ್ಯ ಕ್ರಮ ಕೈಗೊಂಡು, ಆಯುಕ್ತರು ಕ್ರಮ ಕೈಗೊಳ್ಳುವುದು".

ಶ್ರೀ. ಎಂ.ನಾಗರಾಜ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿಭಾವಂತ ಕ್ರೀಡಾಪಟುಗಳಿದ್ದು, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಂಡು ನಾಡನ್ನು ಉತ್ತುಂಗಕ್ಕೆ ಕೊಂಡೊಯ್ಯುತ್ತಿದ್ದು, ಪ್ರತಿಭಾವಂತ ಕ್ರೀಡಾಪಟುಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ನಾಡಿನ ಕೀರ್ತಿಯನ್ನು ಬೆಳಗಲು ಉತ್ತೇಜನ ನೀಡುವ ಹಿನ್ನಲೆಯಲ್ಲಿ ಕ್ರೀಡಾಪಟುಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಹುಮ್ಮಸ್ಸನ್ನು ತುಂಬುವ ನಿಟ್ಟಿನಲ್ಲಿ ಪೂಜ್ಯ ಮಹಾಪೌರರು ಆಜ್ಞೆ ಮಾಡುವ ಕಾಮಗಾರಿಯ ಅನುದಾನದಡಿಯಲ್ಲಿ 25 ಲಕ್ಷ ರೂ.ಗಳನ್ನು ಸಹಾಯಧನವನ್ನಾಗಿ ನೀಡಲು ಅವಕಾಶ ಕಲ್ಪಿಸಲು ಅಗತ್ಯ ಕ್ರಮ ಕೈಗೊಂಡು, ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು